ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಾಚೀನ ಲೇಖನ ಸಾಮಗ್ರಿ

ಡಾ. ಆಲ್ಬರ್ಟಿನ್ ಗೌರ್

ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆ ೧೮

ಪ್ರಾಚೀನ ಲೇಖನ ಸಾಮಗ್ರಿಗಳು

ಲೇಖಕರು

ಡಾ. ಆಲ್ಬರ್ಟಿನ್ ಗೌರ್

ಅನುವಾದಕರು

ಡಾ. ಶ್ರೀನಿವಾಸ ಹಾವನೂರ

ಡಾ. ಲಕ್ಷ್ಮೀನಾರಾಯಣ ಆರೋರಾ

ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

PRAACHINA LEKHANA SAAMAGRIGALU

by

Dr. ALBERTINE GAUR (London)

Translated by

Dr. Srinivasa Havanur

Dr. Lakshminarayana Arora

Published by

Dr. H.C. Boralingaiah

Director, Prasaranga

Kannada University, Hampi

Vidyaranya 583 276

Pages: viii + 40 Rs. 30/-

First Impression : 2003

www.kavihampi.org

© ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೩

ಬೆಲೆ ರೂ. ೩೦/-

ಮುಖಪುಟ : ಕೆ.ಕೆ. ಮಕಾಳಿ

ಪ್ರಕಾಶಕರು

ಡಾ. ಹಿ.ಚಿ. ಬೋರಲಿಂಗಯ್ಯ

ನಿರ್ದೇಶಕರು, ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಅಕ್ಷರ ಸಂಯೋಜನೆ

ವಿದ್ಯಾರಣ್ಯ ಗಣಕ ಕೇಂದ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮುದ್ರಣ

ತ್ವರಿತ ಮುದ್ರಣ ಆಫ್‌ಸೆಟ್ ಪಿಂಟರ್ಸ್, ಗದಗ

ಡಾ. ಆಲ್ಬರ್ಟಿನ್ ಗೌರ್

ಶ್ರೀಮತಿ ಗೌರ್ ಮೂಲತಃ ಆಸ್ಟ್ರಿಯಾ ದೇಶದವರು. ಲಂಡನ್ನಿನ ಬ್ರಿಟಿಶ್ ಲೈಬ್ರರಿಯ ದಕ್ಷಿಣ ಭಾರತ ಭಾಷಾ ಗ್ರಂಥ ವಿಭಾಗದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಮೊದಲಿನಿಂದಲೂ ಸಂಶೋಧನೆಯ ಆಸಕ್ತಿ ಮತ್ತು ಆಳವಾದ ಪರಿಶ್ರಮ, ಅಧ್ಯಯನ ಮತ್ತು ಗ್ರಂಥ ರಚನೆಯಲ್ಲಿ ಸದಾ ತೊಡಗಿಕೊಂಡವರು. ಈಚಿನ ಅವರ 'Writing' ಎಂಬ ಉದ್ಗ್ರಂಥದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದ ಇಂದಿನ ಕಂಪ್ಯೂಟರ್ ಯುಗದವರೆಗಿನ ಬರಹದ ವಿಕಾಸವನ್ನು ರೂಪಿಸಿದ್ದಾರೆ. ಬೇರೆ ಹಲವು ಮೌಲಿಕ ಕೃತಿಗಳೂ ಇವೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಅವರು ೧೯೮೫ ರಲ್ಲಿ 'Supplementary Catalogue of Kannada Books' ಎಂಬ ಸೂಚಿಯನ್ನು ತಯಾರಿಸಿದ್ದು, ಅದರಲ್ಲಿ ಕನ್ನಡ ಗ್ರಂಥಗಳ ವಿವರಗಳಿವೆ. ಅದರಂತೆ ಮಲೆಯಾಳಿ ಗ್ರಂಥಗಳ ಕೆಟಲಾಗ್ ಸಹ ರಚಿತವಾಗಿದೆ. 'Indian Charter on Copper Plates' ಎಂಬ ಅವರ ಕೃತಿಯೂ ಉಲ್ಲೇಖನೀಯ. ಈ ತಾಮ್ರಶಾಸನಗಳೆಲ್ಲ ಜೆ.ಎಫ್. ಫ್ಲೀಟರು ಉತ್ತರ ಕರ್ನಾಟಕದಲ್ಲಿದ್ದಾಗ ಸಂಗ್ರಹಿಸಿದವುಗಳು.

ಡಾ. ಗೌರ್ ಹಲವು ಬಾರಿ ಬೆಂಗಳೂರಿಗೆ ಬಂದಿದ್ದಾರೆ; ಕರ್ನಾಟಕದಲ್ಲಿ ಅವರ ನಿಕಟ ಪರಿಚಯಸ್ಥರಿದ್ದಾರೆ.

ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತ ಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗ ರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ಸೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲ ಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು

ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾ ಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ಸ್ವತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೭೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಹಸ್ತಪ್ರತಿಶಾಸ್ತ್ರ ವಿಭಾಗವು 'ಪ್ರಾಚೀನ ಲೇಖನ ಸಾಮಗ್ರಿಗಳು' ಎನ್ನುವ ಅಪೂರ್ವ ಮತ್ತು ವಿಶಿಷ್ಟಪೂರ್ಣವಾದ ಪುಸ್ತಕವೊಂದನ್ನು ತನ್ನ ವಿಭಾಗ ಮಾಲೆಯಲ್ಲಿ ಪ್ರಕಟಿಸಿದೆ. ಇದರ ಮೂಲ ಲೇಖಕರು ಡಾ. ಅಲ್ಬರ್ಟಿನ್ ಗೌರ್. ಜಗತ್ತಿನ ಹಸ್ತಪ್ರತಿಗಳ ಸ್ವರೂಪ, ಬರವಣಿಗೆಯ ಪರಿಕರಗಳು, ಲಿಪಿಕಾರರ ಅನೇಕ ರೀತಿಯ ಬರವಣಿಗೆಯ ಸಾಂಸ್ಕೃತಿಕ ನೆಲೆಗಳನ್ನು ಈ ಪುಟ್ಟ ಕೃತಿ ಹೊತ್ತು ನಿಂತಿದೆ. ಇಂತಹ ಒಂದು ಪುಸ್ತಕವನ್ನು ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿಕೊಟ್ಟ ನಾಡಿನ ಖ್ಯಾತ ವಿದ್ವಾಂಸರಾದ ಡಾ. ಶ್ರೀನಿವಾಸ ಹಾವನೂರು ಮತ್ತು ಡಾ. ಲಕ್ಷ್ಮೀನಾರಾಯಣ ಅರೋರಾ ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಡಾ. ಎಚ್.ಜೆ. ಲಕ್ಕಪ್ಪಗೌಡ
ಕುಲಪತಿಯವರು

ವಿಭಾಗದ ಮಾತು

'ಬೆಳೆಯುವ ಸಿರಿಯನ್ನು ಮೊಳಕೆಯಲ್ಲಿ ನೋಡು' ಎನ್ನುವ ಮಾತಿನಂತೆ, ಕನ್ನಡ ಶ್ವ ವಿದ್ಯಾಲಯ ಹಸ್ತಪ್ರತಿಶಾಸ್ತ್ರ ವಿಭಾಗವು ತನ್ನ ಎಳೆಯ ವಯಸ್ಸಿನಲ್ಲೇ ವಿಶಿಷ್ಟ ಧನೆಯನ್ನು ಮಾಡುತ್ತಿದೆ. ಬರೀ ನಿರ್ಜೀವ ಆಕರಗಳಂತೆ ಬಳಕೆಯಾಗುತ್ತಿದ್ದ ಹಸ್ತಪ್ರತಿ ಳನ್ನು, ಸಮಕಾಲೀನ, ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ತಾಂತ್ರಿಕ ಆವಿಷ್ಕಾರಗಳ ಹಿನ್ನೆಲೆ ಯಲ್ಲಿ ಹೊಸರೀತಿಯಾಗಿ ಅಧ್ಯಯನಿಸುತ್ತಿದೆ. ಹಸ್ತಪ್ರತಿಶಾಸ್ತ್ರಗಳ ಸಂಗ್ರಹ, ಸಂಪಾದನೆ, ರಿಷ್ಕರಣ, ಪ್ರಕಟಣೆ, ವಿಶ್ಲೇಷಣೆ ಮತ್ತು ಗಣಕೀಕರಣದಂತಹ ಕಾರ್ಯಗಳೊಂದಿಗೆ, ಡಿನ ಸುಪ್ರಸಿದ್ಧ ವಿದ್ವಾಂಸರು, ವಿಮರ್ಶಕರು, ಚಿಂತಕರು ಮತ್ತು ಹಸ್ತಪ್ರತಿಶಾಸ್ತ್ರ ಾನಿಗಳೊಂದಿಗೆ ವಿವಿಧ ರೀತಿಯ ಸಂವಾದ, ಚರ್ಚೆ, ವಿಚಾರ ಸಂಕಿರಣಗಳಲ್ಲದೆ ರಬೇತಿ ಶಿಬಿರ, ಕಾರ್ಯಾಗಾರಗಳ ಮೂಲಕ ತನ್ನ ಕಾರ್ಯಕ್ಷೇತ್ರವನ್ನು ಸೃಜನಾತ್ಮಕ ಾಗಿ ಮತ್ತು ವ್ಯಾಪಕವಾಗಿ ಹಿಗ್ಗಿಸಿಕೊಳ್ಳುತ್ತಿದೆ.

ವಿಭಾಗವು ಈಗಾಗಲೇ ೪,೦೦೦ಕ್ಕಿಂತಲೂ ಅಧಿಕ ಅಮೂಲ್ಯ ಹಸ್ತಪ್ರತಿಗಳನ್ನು ಂಗ್ರಹಿಸಿ ಸಂರಕ್ಷಿಸುತ್ತಿದೆ. ಹಲವಾರು ಮೌಲಿಕ ಯೋಜನೆಗಳನ್ನು ನಿರ್ವಹಿಸಿದೆ. ಭಾಗದ ಅಧ್ಯಾಪಕರ ಅವಿರತ ಶ್ರಮದಿಂದಾಗಿ, ಎರಡು ಹಸ್ತಪ್ರತಿ ಸೂಚಿಗಳು, ಸ್ವತಂತ್ರ ುತ್ತು ಸಂಪಾದಿತ ರೂಪದ ಹನ್ನೆರಡು ಮೌಲಿಕ ಪುಸ್ತಕಗಳು ಪ್ರಕಟಗೊಂಡಿವೆ. ಇವೆಲ್ಲವು ಾಂಪ್ರದಾಯಿಕ ಅಧ್ಯಯನ ಕ್ರಮದಿಂದ ಭಿನ್ನವಾಗಿ ಗ್ರಂಥಸಂಪಾದನೆ ಮತ್ತು ಸ್ತಪ್ರತಿಶಾಸ್ತ್ರ ಕ್ಷೇತ್ರದಲ್ಲಿ ಹೊಸ ರೀತಿಯ ಚರ್ಚೆಗಳಿಗೆ ಗ್ರಾಸವನ್ನು ಒದಗಿಸಿವೆ.

ಪ್ರಸ್ತುತ ಕೃತಿಯು ಹಸ್ತಪ್ರತಿ ವಿಭಾಗ ಮಾಲೆಯ ಹದಿನೆಂಟನೆಯ ಪ್ರಕಟಣೆಯಾಗಿದೆ. ್ಯಾತ ವಿದ್ವಾಂಸರಾದ ಡಾ. ಆಲ್ಬರ್ಟಿನ್ ಗೌರ್ (ಲಂಡನ್) ಅವರ 'Writing Ma-erials of the East ಎ' ನ್ನುವ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ ನಾಡಿನ ಹಿರಿಯ ದ್ವಾಂಸರಾದ ಡಾ. ಶ್ರೀನಿವಾಸ ಹಾವನೂರು ಮತ್ತು ಡಾ. ಲಕ್ಷ್ಮೀನಾರಾಯಣ ಆರೋರಾ ವರು, ಕನ್ನಡದ ತಿಳುವಳಿಕೆ ಹೊರಗಿನವರಿಗೆ ತಲುಪಬೇಕು. ಹೊರಗಿನ ತಿಳುವಳಿಕೆ ನ್ನಡದ ಮೂಲಕ ಒಳಗೆ ಬರಬೇಕು ಎನ್ನುವ ಕನ್ನಡ ವಿಶ್ವವಿದ್ಯಾಲಯದ ಆಲೋಚನಾ ಮಕ್ಕೆ ಈ ಕೃತಿಯು ಉತ್ತಮ ನಿದರ್ಶನವಾಗಿದೆ. ಬರೀ ಕನ್ನಡಕ್ಕೆ ಸೀಮಿತವಾಗಿದ್ದ ಸ್ತಪ್ರತಿ ಅಧ್ಯಯನ ಕ್ಷೇತ್ರಕ್ಕೆ ಈ ಕೃತಿ ಕನ್ನಡೀಕರಣಗೊಳ್ಳುವ ಮೂಲಕ ಪ್ರಪಂಚ

ವ್ಯಾಪ್ತಿಯ ಅನುಭವ ಪ್ರಾಪ್ತವಾಗಿದೆ. ಜಾಗತಿಕ ಮಟ್ಟದಲ್ಲಿನ ಹಸ್ತಪ್ರತಿಗಳ ಸ್ವರೂಪ, ಬರವಣಿಗೆಯ ಸಾಧನಗಳು, ಮಾದರಿಗಳು, ಬಳಸುವ ಪದಾರ್ಥಗಳು, ಲಿಪಿಕಾರರು, ಹೀಗೆ ಅನೇಕ ರೀತಿಯ ಸಂಗತಿಗಳನ್ನು ಈ ಕೃತಿ ಗರ್ಭೀಕರಿಸಿಕೊಂಡಿದೆ. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ತನ್ನ ಅಧ್ಯಯನದ ಎಲ್ಲೆಯನ್ನು ಕನ್ನಡದ ಮೂಲಕ ಜಾಗತಿಕಗೊಳಿಸಬೇಕು, ಹೊರಗಿನ ಅನುಭವವನ್ನು ಪಡೆದುಕೊಳ್ಳುವ ಮೂಲಕ ಈ ಅಧ್ಯಯನ ಕ್ಷೇತ್ರಕ್ಕೆ ವಿಸ್ತಾರತೆಯನ್ನು ತಂದುಕೊಳ್ಳಬೇಕೆನ್ನುವ ಆಶಯವುಳ್ಳದ್ದಾಗಿದೆ. ಈ ಆಶಯಕ್ಕೆ ಈ ಪುಸ್ತಕ ಸಶಕ್ತತೆಯನ್ನು ತಂದು ಕೊಟ್ಟಿದೆ. ಕನ್ನಡ ಹಸ್ತಪ್ರತಿ ಓದುಗರಿಗೆ ಜಾಗತಿಕ ಅನುಭವವನ್ನು ತಂದುಕೊಡಲು ಶ್ರಮಿಸಿದ ನಾಡಿನ ಹಿರಿಯ ವಿದ್ವಾಂಸರಾದ ಡಾ. ಶ್ರೀನಿವಾಸ ಹಾವನೂರು ಮತ್ತು ಡಾ. ಲಕ್ಷ್ಮೀನಾರಾಯಣ ಆರೋರಾ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಡಾ. ವೀರೇಶ ಬಡಿಗೇರ
ಮುಖ್ಯಸ್ಥರು
ಹಸ್ತಪ್ರತಿಶಾಸ್ತ್ರ ವಿಭಾಗ

ಪ್ರಾಚೀನ ಲೇಖನ ಸಾಮಗ್ರಿಗಳು

ಬರಹಕ್ಕೆ ಸಂಬಂಧಿಸಿದ ಬಹುತರ ಎಲ್ಲ ಅನ್ವೇಷಣೆಗಳು ಪೌರ್ವಾತ್ಯ ರಾಷ್ಟ್ರಗಳಿಂದಲೇ ಬಂದುವಾಗಿವೆ. ಉದಾಹರಣೆಗೆ ಮುದ್ರಣ ವಿಧಾನ, ಕಾಗದ ತಯಾರಿಕೆ, ಮೃದು ಚರ್ಮಕಾಗದ (Vellum) ಚರ್ಮಕಾಗದ (Parchment), ಮಸಿ ಮತ್ತು ಲೆಕ್ಕಣಿಕೆಗಳು, ಪುಸ್ತಕಕ್ಕೆ ರಟ್ಟುಕಟ್ಟುವ ವಿಧಾನ, ಪುಸ್ತಕದಲ್ಲಿ ಚಿತ್ರಗಳನ್ನು ಕೊಡುವ ವಿವಿಧ ರೀತಿ - ಇವೆಲ್ಲ ಮೊದಲು ಮೈದಳೆದದ್ದು ಏಶಿಯದಲ್ಲಿ; ಇಲ್ಲವೆ ಉತ್ತರ ಆಫ್ರಿಕದ ರಾಷ್ಟ್ರಗಳಲ್ಲಿ.

ಒಂದೊಂದು ಕಾಲಕ್ಕೆ ಒಂದೊಂದು ಕಡೆಯಲ್ಲಿ ನಿರ್ದಿಷ್ಟ ಬಗೆಯ ಬರಹದ ಸಾಮಗ್ರಿಯನ್ನು ಬಳಸಿದ್ದುದು ಕಂಡು ಬರುತ್ತದೆ. ಇದಕ್ಕೆ ಕಾರಣಗಳು ಹಲವಾರು. ಮುಖ್ಯ ಕಾರಣವೆಂದರೆ ಯಾವದೊಂದು ಪ್ರದೇಶದ ಮಿತಿಯಲ್ಲಿ ದೊರೆಯುವ ಬರಹ ಸಾಮಗ್ರಿಯ ಪ್ರಮಾಣ ಮತ್ತು ಅಂದುಂದಿನ ತಾಂತ್ರಿಕ ಪರಿಜ್ಞಾನ. ಚೀನ ದೇಶಕ್ಕೆ ಬಿದಿರು ತನ್ನ ಬಾಹುಳ್ಯದಿಂದ ಅನುಕೂಲವಾಗಿ ಕಂಡರೆ ಭಾರತ ದೇಶಕ್ಕೆ ತಾಳೆಗರಿ ಹೆಚ್ಚು ಪ್ರಯೋಜನಕ್ಕೆ ಒದಗಿತು. ಮೆಸಪೊಟೆಮಿಯದಲ್ಲಿ ಬಳಕೆಗೆ ಬಂದುದು ಜೇಡಿಮಣ್ಣಿನ ಇಟ್ಟಿಗೆಯಾದರೆ, ಈಜಿಪ್ತ ದೇಶಕ್ಕೆ, ಅಲ್ಲಿ ವಿಪುಲವಾಗಿ ಬೆಳೆಯುತ್ತಿದ್ದ 'ಪೆಪಿರಿಸ್' ಎಂಬ ಸಸ್ಯ. ಕೆಲವು ಬರವಣಿಗೆ ಸಾಮಗ್ರಿಗಳಂತೂ ಒಂದು ನಿರ್ದಿಷ್ಟ ಸಾಂಸ್ಕೃತಿಕ ಹಂತ ಕಳೆದ ಮೇಲೆಯೇ, ಎಂದರೆ ಲೋಹ, ಚರ್ಮ ಮುಂತಾದ ಕಚ್ಚಾ ಸಾಮಗ್ರಿಗಳನ್ನು ಪರಿಷ್ಕರಿಸಿ, ಪರಿವರ್ತಿಸುವ ಘಟ್ಟಕ್ಕೆ ತಲುಪಿದ ಮೇಲೆಯೇ ಬಳಕೆಗೆ ಬಂದುವು. ಇತ್ತ ಪರಂಪರೆಯೂ ಈ ದೆಸೆಯಲ್ಲಿ ತನ್ನ ಪ್ರಭಾವವನ್ನು ಬೀರಿತ್ತು.

ಚರ್ಮಕಾಗದವು ಇರಾನನ್ನು ದಾಟಿ ಪೂರ್ವದಿಕ್ಕಿಗೆ ಬಂದಿರಲೇ ಇಲ್ಲ. ಭಾರತದಲ್ಲಾದರೋ, ನಿಮ್ನ ಜಾತಿಯವರು ಮಾತ್ರ ಸತ್ತ ಪ್ರಾಣಿಗಳ ಚರ್ಮವನ್ನು ಮುಟ್ಟುತ್ತಿದ್ದರೇ ವಿನಾ, ಇಂಥ 'ಅಶುದ್ಧ' ಸಾಮಗ್ರಿಯ ಮೇಲೆ ಪವಿತ್ರವಾದ ಗ್ರಂಥಗಳನ್ನು ದಾಖಲಿಸಿ ಕಾಯ್ದಿರಿಸುವ ವಿಚಾರವನ್ನು ಸರ್ವಥಾ ಮಾಡಲಿಲ್ಲ. ಏನೇ ಇರಲಿ. ಮನುಷ್ಯನ ತಾಂತ್ರಿಕ ಪ್ರತಿಭೆಯ ಫಲವಾಗಿ ಕಾಲಕಾಲಕ್ಕೆ ಸೂಕ್ತವಾದ ಸಾಮಗ್ರಿಗಳನ್ನು ಹುಟ್ಟುಹಾಕಿ ಆ ಮೂಲಕ ವೈವಿಧ್ಯಪೂರ್ಣವಾದ ಬರಹ ಸಾಮಗ್ರಿಗಳನ್ನು ಬಳಸಿದ್ದು ಕಂಡು ಬರುತ್ತದೆ. ಒಂದೊಂದಾಗಿ ನೋಡೋಣ:-

ಶಿಲೆ

ಕೆಲವು ಬರವಣಿಗೆಯ ಸಾಮಗ್ರಿಗಳು ನೈಸರ್ಗಿಕವಾಗಿ ಬಳಕೆಗೆ ಬಂದುವು. ಶಿಲೆ ಹಾಗೆ ನಿಸರ್ಗದತ್ತವಾದುದು. ಪ್ರಪಂಚದಲ್ಲಿ ಎಲ್ಲೆಡೆ ದೊರೆಯುವ ಈ ಸಾಧನದ ಮೇಲೆ ಗೆರೆ ಎಳೆಯಬಹುದು, ಅಕ್ಷರ-ಚಿತ್ರಗಳನ್ನು ಮೂಡಿಸಬಹುದು. ಬಣ್ಣ ಹಚ್ಚಬಹುದು. ಶಿಲೆಯು ಚಿರಕಾಲ ಉಳಿಯುವ ವಸ್ತುವಾದ್ದರಿಂದ, ರಾಜ್ಯವ್ಯವಹಾರ ಮತ್ತು ದೇವಸ್ಥಾನಗಳಿಗೆ ಸಂಬಂಧಿಸಿದ ಶಾಸನಗಳಿಗಾಗಿ ಇದನ್ನು ಜಗದಾದ್ಯಂತ ವ್ಯಾಪಕವಾಗಿ ಬಳಸಲಾಯಿತು. ಅನ್ಯ ರಾಜರುಗಳ ಮೇಲೆ ವಿಜಯವನ್ನು ಸಾಧಿಸಿದ ಸಾಹಸಮಯ ಘಟನೆಗಳು, ಆಡಳಿತಗಾರರ ನ್ಯಾಯ ಶಾಸನಗಳು (ಅವುಗಳಲ್ಲಿ ನ್ಯಾಯ ಇರುತ್ತಿತ್ತೋ ಇಲ್ಲವೋ, ಆ ಮಾತು ಬೇರೆ!) ವೇದೋಪನಿಷತ್ತು ಮುಂತಾದ ಪವಿತ್ರ ಗ್ರಂಥಗಳ ಸೂತ್ರಬದ್ಧ ನುಡಿಗಳು - ಇವೇ ಮೊದಲಾದುವನ್ನು ಶಾಸನಗಳ ರೂಪದಲ್ಲಿ ದಾಖಲು ಮಾಡಲು ಮೊದಲಿಗೆ ಕಲ್ಲನ್ನು ಬಳಸಲಾರಂಭಿಸಿದರು. ಈಜಿಪ್ಟ್ ಮತ್ತು ಮೆಸಪೊಟೆಮಿಯಗಳಲ್ಲಿ ಒರಟಾದ ಇಲ್ಲವೆ ನಯಮಾಡಿದ ಬಂಡೆಗಳ ಮೇಲೆ, ಕಲ್ಲಿನ ಚಪ್ಪಡಿಗಳ ಮೇಲೆ, ದೊಡ್ಡ ದೊಡ್ಡ ಬಂಡೆಗಳ ಮೇಲೆ ಅಥವಾ ಕಟ್ಟಡಗಳ ಮೇಲೆ ಕ್ರಿ. ಪೂ. ನಾಲ್ಕು ಸಹಸ್ರ ವರ್ಷಗಳಷ್ಟು ಹಳೆಯದಾದ ಬೃಹದಾಕಾರದ ಶಿಲಾಶಾಸನಗಳು ದೊರೆಯುತ್ತವೆ. ಪರ್ಷಿಯನ್ನರೂ ಇದೇ ಪರಂಪರೆಯನ್ನು ಮುಂದುವರಿಸಿದರು. ಇವರಿಂದ ಪ್ರಭಾವಿತರಾದ ಅರಬ್ಬರು ಕುರಾನಿನ ಪದ್ಯಗಳನ್ನೋ ಅಥವಾ ತಮ್ಮ ಆಡಳಿತಗಾರರನ್ನೋ ಸುಂದರವಾದ ಬರವಣಿಗೆಯಲ್ಲಿ ದಾಖಲಿಸಿಡಲು ಅಮೃತಶಿಲೆಯ ಚಪ್ಪಡಿಗಳಲ್ಲಿ ಬಳಸಲಾರಂಭಿಸಿದರು. ಪ್ರಸಿದ್ಧವಾದ ಹತ್ತು ಆಜ್ಞೆಗಳನ್ನು (Ten commandments) ಮೊದಲಿಗೆ ಕೆತ್ತಿದ್ದು ಕಲ್ಲಿನ ಮೇಲೆಯೆ ಎಂದು ಯೆಹೂದಿಗಳ ಪರಂಪರೆ ಹೇಳುತ್ತದೆ. ಭಾರತದ ಮೊದಲ ಬರವಣಿಗೆ ದಾಖಲಾದುದೆಂದರೆ ಅಶೋಕನ ಶಿಲಾಸ್ತಂಭಗಳಲ್ಲಿ. ಅಶೋಕ ಚಕ್ರವರ್ತಿಯು ಬೌದ್ಧಧರ್ಮವನ್ನು ಸ್ವೀಕರಿಸಿ, ಅದರ ಅಂಗವಾಗಿ ಮಾನವೀಯವಾದ ಅಂಶಗಳನ್ನು ಸ್ತಂಭಗಳ ಮೇಲೆ ಬರೆಯಿಸಿ ತನ್ನ ಸಾಮ್ರಾಜ್ಯದಲ್ಲೆಲ್ಲ ಪ್ರಚುರಪಡಿಸಿದನು.

ಅಶೋಕ ಚಕ್ರವರ್ತಿಗೆ ಸರಿದೊರೆಯಾಗಿ ರಾಜ್ಯಭಾರ ನಡೆಸಿದ ಚೀನದ ಚಕ್ರವರ್ತಿ ಖಿನ್ ಷಿಹುವಾಂಗ್ ಡಿ (ಕ್ರಿ. ಪೂ. ೨೪೯ - ೨೦೭) ಸಹ ಅಶೋಕನ ರೀತಿಯಲ್ಲಿಯೇ ತನ್ನ ಶಾಸನಗಳನ್ನು ಶಾಶ್ವತಗೊಳಿಸುವತ್ತ ಗಮನಕೊಟ್ಟನು. ಚಿರಕಾಲ ಉಳಿಯಬೇಕಾದ ಧರ್ಮ ಸಂಬಂಧವಾದ ಗ್ರಂಥಗಳನ್ನು ಶಿಲೆಗಳ ಮೇಲೆ ದಾಖಲಿಸುವುದೇ ಅಲ್ಲದೆ,

ಕನ್‌ಫ್ಯೂಶಿಯಸ್ಸನ ಧರ್ಮಸೂತ್ರಗಳನ್ನು 'ಶಾಶ್ವತಗೊಳಿಸುವ' ಉದ್ದೇಶದಿಂದ, ಅವನ್ನು ಕಲ್ಲುಗಳ ಮೇಲೆ ಕೆತ್ತಿಸಿದ. ಅದರಿಂದ ಅವು ತುಳಿತಕ್ಕೆ ಸಿಕ್ಕಿ ಪಾಠಾಂತರ ಹೊಂದುವುದನ್ನು ತಪ್ಪಿಸಿದ. ದೊಡ್ಡ ಗ್ರಂಥಗಳನ್ನು ಇಡಿಯಾಗಿ ಕಲ್ಲಿನ ಮೇಲೆ ಕೆತ್ತಲು ತುಂಬ ಸಮಯ ಹಿಡಿಯುತ್ತಿದ್ದುದರಿಂದ ಮೊದಲನೆಯ ಶತಮಾನದ ಮಧ್ಯಕಾಲದ ವೇಳೆಗೆ ಶಾಯಿಯಿಂದ ಪ್ರತಿ ತೆಗೆದುಕೊಳ್ಳುವ ವಿಧಾನವೊಂದನ್ನು ಬಳಕೆಗೆ ತರಲಾಯಿತು. ಇದು ಅತಿ ಸುಂದರವಾದ, ಹಾಗೂ ಅತ್ಯಂತ ಯಥಾವತ್ತಾದ ನಕಲನ್ನು ಒದಗಿಸಿಕೊಟ್ಟಿತು. ಆದರೆ ಇಂಥ ಶಾಯಿ ಲೇಪನಗಳು ಮೂಲಕ್ಕೆ ಧಕ್ಕೆಯುಂಟುಮಾಡಬಹುದಾಗಿದ್ದಿತು. ಹಾಗೂ ಪ್ರತಿ ಸಾರಿಗೆ ಹೆಚ್ಚು ಹಣ ಖರ್ಚು ಮಾಡಿ ಆ ಲೇಪನವನ್ನು ತೆಗೆಯಿಸಬೇಕಾಗುತ್ತಿತ್ತು. ಇದರಿಂದಾಗಿ ಮೂಲದಲ್ಲಿರುವ ಕಲ್ಲಕ್ಷರಗಳನ್ನು ಮರದ ಹಲಗೆಗಳ ಮೇಲೆ ತಿರುಗು ಮುರುಗು (Negative) ಅಕ್ಷರಗಳಲ್ಲಿ ಪ್ರತಿ ಮಾಡಿಕೊಳ್ಳುವ ವಿಧಾನ ಬಳಕೆಗೆ ಬಂತು. ಆ ಮುಂದೆ ತಿರುಗುಮುರುಗು ಅಕ್ಷರಗಳಿಂದ ನೇರವಾದ ಅಕ್ಷರಗಳನ್ನು ಅದೇ ರೀತಿಯ ಹಲಗೆಗಳ ಮೇಲೆ ಬೇಗನೆ ಪಡೆದುಕೊಳ್ಳುವುದು ಸುಲಭ ಸಾಧ್ಯವಾಯಿತು. ಇದರ ಫಲಿತಾಂಶ; ಬಿಳಿಕಾಗದದ ಮೇಲೆ ಕಪ್ಪು ಅಕ್ಷರಗಳು ಮೂಲದ ಶೈಲಿಯಲ್ಲಿ ಬರೆದಂತೆಯೇ ಕಾಣತೊಡಗಿದವು. ಕ್ರಿ.ಶ. ೯ನೇ ಶತಮಾನದ ವೇಳೆಗೆ ಚೀನೀಯರು ಪಡಿಯಚ್ಚು ಮುದ್ರಣ ಕಲೆಯಲ್ಲಿ ಕೌಶಲವನ್ನು ಸಂಪಾದಿಸಿಕೊಂಡಿದ್ದರು. ೧೧ನೇ ಶತಮಾನದ ಹೊತ್ತಿಗೆ ಬಿಡಿ ಮೊಳೆಗಳ ಮುದ್ರಣವನ್ನು ಕಂಡು ಹಿಡಿಯುವ ಬಗ್ಗೆ ಅವರು ಪ್ರಯತ್ನ ನಡೆಸಿದರು. ಆ ಮುಂದೆ ಬೌದ್ಧ ಧರ್ಮದೊಂದಿಗೆ ಮುದ್ರಣ ಕಲೆಯೂ ಪ್ರಸಾರಗೊಂಡು ಕೊರಿಯ ಮತ್ತು ಜಪಾನುಗಳೆಡೆಗೆ ವಿಸ್ತರಿಸಿತು.

ಮೊಹರುಗಳು (ಬೆಲೆಯುಳ್ಳ ಹರಳುಗಳಿಂದ ಮಾಡಿದವುಗಳು)

ಬರವಣಿಗೆ ವಾಸ್ತವವಾಗಿ ರೂಪುಗೊಳ್ಳುವುದಕ್ಕೆ ಮೊದಲೇ ಮೆಸಪೊಟೇಮಿಯದಲ್ಲಿ ಮೊಹರು ಅಥವಾ ಮುದ್ರೆ (seals)ಗಳನ್ನು ಬಳಸಿ ಒಪ್ಪಂದಗಳನ್ನು ಕಾನೂನು ಬದ್ಧಗೊಳಿಸುತ್ತಿದ್ದರು. ಆಸ್ತಿಪಾಸ್ತಿಗಳ ಮೇಲೆ ಮುದ್ರೆಯ ಅಂಕಿತವನ್ನು ಒತ್ತುತ್ತಿದ್ದರು. ಈಗ್ಗೆ ಸುಮಾರು ೫,೦೦೦ ವರ್ಷಗಳಷ್ಟು ಹಿಂದೆಯೆ ಪ್ರಾಚೀನ ಈಜಿಪ್ಟಿನಲ್ಲಿ ಹಾಗೂ ಸಿಂಧೂ ಕಣಿವೆಗೆ ಸೇರಿದ ನಗರಗಳಲ್ಲಿ ಹೊಂದಿದ್ದ ಮುದ್ರೆಯುಂಗುರಗಳು ಬಳಕೆಯಲ್ಲಿದ್ದುವು. ಈ ಪದ್ಧತಿ ಇಂದಿಗೂ ಪೌರ್ವಾತ್ಯ ಮತ್ತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿದೆ. ಸುಮೇರಿಯನ್ ಮೊಹರುಗಳು ಪ್ರಾಚೀನ ಕಾಲದ ಎಲ್ಲ ಕಲಾಮಾದರಿಗಳನ್ನೂ ಬದಿಗೊತ್ತಿ ಬಹಳಷ್ಟು ಮೆರೆದುವಷ್ಟೆ. ಅವುಗಳ ಕುರಿತು

ಅತ್ಯುತ್ಕೃಷ್ಟ ಸಾಹಿತ್ಯ ಹೊರಬಂದಿದೆ. ಆದರೆ ಸುಮಾರು ಕ್ರಿ. ಪೂ. ೨೮೦೦ರ ಕಾಲದ್ದೆಂದು ಹೇಳಲಾಗಿದ್ದು, ಹರಪ್ಪ ಮತ್ತು ಮೊಹೆಂಜದಾರೊಗಳಲ್ಲಿ ದೊರೆತಿರುವ ಮೊಹರುಗಳ ಮೇಲೆ ಸಾಕಷ್ಟು ಬೆಳಕು ಬಿದ್ದಿಲ್ಲ. ಆರಂಭ ಕಾಲದ ಸುಮೇರಿಯನ್ ಮೊಹರುಗಳನ್ನು ಇಲ್ಲಿಯ ಅನೇಕ ಮೊಹರುಗಳು ಹೋಲುತ್ತಿದ್ದುದು ಆಶ್ಚರ್ಯಕರ ವಾಗಿದೆ. ಈ ಲಿಪಿಯನ್ನು ಸಂಶೋಧಿಸುತ್ತಿರುವ ಕೆಲವು ಮಂದಿ ವಿದ್ವಾಂಸರು ಇದು ಭಾರತದಲ್ಲೇ ಹುಟ್ಟಿದ್ದೆಂದು ಪ್ರತಿಪಾದಿಸುತ್ತ, ಸಿಂಧೂಕಣಿವೆಯ ನಗರಗಳಿಗೂ ದಕ್ಷಿಣ ಭಾರತದ ಈಗಿನ ದ್ರಾವಿಡ ಜನಾಂಗಕ್ಕೂ ನೇರವಾದ ಸಂಬಂಧವನ್ನು ಕಲ್ಪಿಸುತ್ತಾರೆ. ಆದರೆ ಇನ್ನು ಕೆಲವು ವಿದ್ವಾಂಸರು ಮೆಸಪೊಟೆಮಿಯ ಮತ್ತು ಗ್ರೀಸಿನ ಆಗ್ನೇಯಕ್ಕಿರುವ ಕ್ರೀಟ್ ದ್ವೀಪಗಳೊಡನೆ ಸಂಬಂಧ ಇದ್ದಿರುವ ಸಾಧ್ಯತೆಯ ಬಗ್ಗೆ ತರ್ಕಿಸುತ್ತಾರೆ. ಸತ್ಯ ಸಂಗತಿ ಏನೇ ಇರಲಿ, ಒಟ್ಟಿನಲ್ಲಿ ಈ ಮೊಹರುಗಳು ಸದ್ಯಕ್ಕೆ ಭಾರತದ ಉಪಖಂಡದಲ್ಲಿ ಬಳಕೆಯಲ್ಲಿದ್ದ, ಮೊತ್ತಮೊದಲಿನ ಉಪಲಬ್ಧ ಲಿಖಿತ ದಾಖಲೆಗಳನ್ನು ಪ್ರತಿನಿಧಿಸುತ್ತವೆ.

ಆಮೆಚಿಪ್ಪು

ಮೂಳೆ : ಚೀನದಲ್ಲಿ ದೊರೆತಿರುವ ಮೊತ್ತಮೊದಲನೆಯ ಬರವಣಿಗೆಗಳಲ್ಲಿ ಕೆಲವೆಂದರೆ ಆಮೆ ಚಿಪ್ಪುಗಳ ಮತ್ತು ಪ್ರಾಣಿಗಳ ಮೂಳೆಗಳ ಮೇಲೆ ಕಂಡುಬರುವ ಕೆಲವು ದಾಖಲೆಗಳು (Jia Gu Wen). ತುಂಬಾ ಅಪರೂಪವೆನಿಸಿದ್ದ ಅಮೂಲ್ಯವಾದ ಆಮೆ ಚಿಪ್ಪುಗಳು ಬಳಕೆಯಾಗುತ್ತಿದ್ದುದು ಮುಖ್ಯವಾಗಿ ಚೀನ ಮತ್ತು ಚೀನಿ ಬರವಣಿಗೆಯ ವಿಧಾನದೊಡನೆ ಸಂಬಂಧ ಪಡೆದಿದ್ದ ಆಗ್ನೇಯ ಏಶಿಯದ ಕೆಲವು ಪ್ರದೇಶ ಗಳಲ್ಲಿ ಮಾತ್ರ. ಹಾಗೆಯೆ ಏಶಿಯ ಮತ್ತು ಉತ್ತರ ಆಫ್ರಿಕದ ಅನೇಕ ಭಾಗಗಳಲ್ಲಿ ಸ್ವಲ್ಪ ದೊಡ್ಡ ಪ್ರಾಣಿಗಳೆನಿಸಿದ್ದ ಕುರಿ, ಮೇಕೆ, ಒಂಟೆ, ಅಲ್ಲದೆ ಕುದುರೆಗಳ ಮೂಳೆಯನ್ನು ಸಹ ಇಂತಹದೇ ಉದ್ದೇಶಗಳಿಗಾಗಿ ಬಳಸುತ್ತಿದ್ದರು. ಮಧ್ಯಯುಗದ ವರೆಗಂತೂ ಅರಬರ ಪಾಲಿಗೆ ತಮ್ಮ ದಾಖಲೆಗಳನ್ನು ಮಂತ್ರ ತಂತ್ರಗಳನ್ನು ಮತ್ತು ಕುರಾನಿನ ಸಾಲುಗಳನ್ನು ಬರೆದಿಡಲು ಪ್ರಾಣಿಗಳ ಮೂಳೆಗಳು ಅತ್ಯಂತ ಸುಲಭವಾಗಿ ದೊರೆಯುವ ಹಾಗೂ ಅನುಕೂಲಕರವಾದ ಸಾಮಗ್ರಿಯಾಗಿತ್ತು.

ದಂತ

ಆನೆಯ ಕೊಂಬಿನಿಂದ ದೊರೆಯುವ ದಂತ ತುಂಬ ಅಪರೂಪವಾದ ಹಾಗೂ ದುಬಾರಿಯ ಪದಾರ್ಥ. ಇದು ಪ್ರಾಚೀನ ಈಜಿಪ್ತದವರಿಗೆ ಮತ್ತು ಬೈಬಲ್ಲಿನಲ್ಲಿ ಹೇಳಿರುವ ಮಧ್ಯ ಪ್ರಾಚ್ಯದವರಿಗೆ ಮೊದಲೇ ಪರಿಚಯವಿದ್ದರೂ ದಂತವನ್ನು

ಉಪಯೋಗಿಸಿ ಇಡೀ ಪುಸ್ತಕವನ್ನು ಬರೆದಿಡುವ ಪರಿಪಾಠ ಕೇವಲ ಆಗ್ನೇಯ ಏಶಿಯಕ್ಕೆ ಮಾತ್ರ ಸೀಮಿತವಾಗಿತ್ತು. ಬೌದ್ಧ ಧರ್ಮಗ್ರಂಥಗಳ ಉದ್ಧೃತವಾಗಿರುವ ಭಾಗಗಳನ್ನು ಅಗಲವಾದ ತೆಳ್ಳನೆಯ ದಂತದ ಹಾಳೆಗಳ ಮೇಲೆ, ಎತ್ತರಿಸಿದ ರಾಳಗಳ ಮೆರುಗಿನ ಅಕ್ಷರಗಳಲ್ಲಿ ಬರೆದಿಡುತ್ತಿದ್ದರು. ಅಕ್ಷರಗಳು ಸಾಮಾನ್ಯವಾಗಿ ಕಪ್ಪಾಗಿದ್ದರೂ ಚಿನ್ನದಲ್ಲಿ ಮತ್ತು ಕೆಂಪಿನಲ್ಲಿ ಮನ ಸೆಳೆಯುವಂತೆ ಅಂಚುಗಳನ್ನು ಕಟ್ಟುತ್ತಿದ್ದುದರಿಂದ ನೋಡಲು ವೈಭವೋಪೇತವಾಗಿ ಕಾಣುತ್ತಿದ್ದವು. ಪೌರ್ವಾತ್ಯ ದೇಶಗಳಲ್ಲಿ ಅದರಲ್ಲೂ ವಿಶೇಷವಾಗಿ ಏಶಿಯ ಮತ್ತು ಚೀನಗಳಲ್ಲಿ ಒಂದು ಪತ್ರ ಬರೆಯಲು ಬಳಸಿರುವ ಪದಾರ್ಥ ಅದನ್ನು ಕಳಿಸುವವನ ಶ್ರೀಮಂತಿಕೆಯನ್ನು ತೋರಿಸುವುದು ಮಾತ್ರವಲ್ಲ, ಯಾರನ್ನು ಉದ್ದೇಶಿಸಿ ಪತ್ರ ಬರೆಯಲಾಗಿದೆಯೋ ಆತನ ಸಾಮಾಜಿಕ ಸ್ಥಾನಮಾನಗಳನ್ನು ಪ್ರತಿಬಿಂಬಿಸ ಬೇಕಾಗಿದ್ದುದರಿಂದ, ಇಂಥ ಸಂದರ್ಭಗಳಲ್ಲಿ ದಂತದ ಹಾಳೆಗಳನ್ನು ಬಳಸುವುದು ರೂಢಿಯಲ್ಲಿ ಬಂದಿತು.

ಹಲಗೆ

ಮರ ಬಹಳ ಕಾಲದಿಂದಲೂ ವ್ಯಾಪಕವಾಗಿ ಜನಬಳಕೆಯ ಬರವಣಿಗೆ ಸಾಮಗ್ರಿಯಾಗಿದೆಯೆಂದರೆ ಆಶ್ಚರ್ಯಪಡಬೇಕಾದುದಿಲ್ಲ. ಕಾರಣವೆಂದರೆ ಅದು ಕಲ್ಲಿನಷ್ಟೇ ಸುಲಭವಾಗಿ ದೊರೆಯುವಂಥ ವಸ್ತು. ಅದನ್ನು ವ್ಯಾಪಕವಾಗಿ ಬಳಕೆ ಮಾಡುವುದರಲ್ಲಿ ಅಲ್ಪಸ್ವಲ್ಪ ಮಾತ್ರವೆ ತಾಂತ್ರಿಕ ಸಮಸ್ಯೆಗಳು ಎದುರಾದುವು. ಈಗ ನಮಗೆ ದೊರೆತಿರುವ ಅತ್ಯಂತ ಹಳೆಯ ಹಲಗೆ ಬರಹ ಈಜಿಪ್ಟಿನ ಮಧ್ಯ ಚಕ್ರಾಧಿಪತ್ಯದ ಕಾಲಕ್ಕೆ (ಕ್ರಿ.ಪೂ. ೧೧೩೪-೧೭೮೯) ಸೇರಿದ್ದು. ಮಧ್ಯಪ್ರಾಚ್ಯದಲ್ಲಾದರೋ ಬರವಣಿಗೆಗಾಗಿ ಹಲಗೆಯ ಬಳಕೆ ಕಡೆಯ ಪಕ್ಷ ೨೯೦೦ ರಿಂದ ಹಿಡಿದು ಈಚೆಗೆ ಅರಬ್ಬರ ಕಾಲದವರೆಗೂ ಜಾರಿಯಲ್ಲಿತ್ತೆನ್ನಬಹುದು. ಮರದ ಹಲಗೆಗಳನ್ನು ಬೇರೆ ಬೇರೆ ಆಕಾರಗಳಲ್ಲಿ, ಗಾತ್ರಗಳಲ್ಲಿ ತಯಾರಿಸಬಹುದು. ಅವುಗಳಿಗೆ ಸುಣ್ಣದ ಕಲ್ಲು, ಇದ್ದಿಲು, ಇಟ್ಟಿಗೆಯ ಧೂಳು ಅಥವಾ ಮೇಣವನ್ನು ಲೇಪಿಸಿ ಅವಕ್ಕೆ ಮೆರುಗು ಕೊಡಬಹುದು, ನುಣ್ಣಗಾಗಿ ಹೊಳೆಯುವಂತೆ ಮಾಡಬಹುದು ಇಲ್ಲವೆ ಹಾಗೇನೆ ಉಳಿಸಿಕೊಳ್ಳಬಹುದು. ಅವುಗಳ ಮೇಲೆ ಲೇಖನಿ ಅಥವಾ ಕುಂಚವನ್ನು ಉಪಯೋಗಿಸಿ ಮಸಿಯಿಂದ ಬರವಣಿಗೆ ಕೆಲಸವನ್ನು ಮಾಡುತ್ತಿದ್ದರು. ಆಗೀಗ ಚೂಪಾದ ಆಯುಧದಿಂದ ಕೆತ್ತಿ ಬರೆಯುತ್ತಿದ್ದುದೂ ಉಂಟು.



[illegible]

ಚೀನದಲ್ಲಿ ಕ್ರಿ. ಪೂ. ೪೫-೩೩ಕ್ಕೆ ಸೇರಿದ, ಅತ್ಯಂತ ಪ್ರಾಚೀನವೆನ್ನಬಹುದಾದ ಮರದ ಪುಸ್ತಕವೊಂದರ ತುಣುಕುಗಳು ದೊರೆತಿವೆ. ಇದೊಂದು ಪದಕೋಶ. ಇದರಲ್ಲಿಯೂ ಮರದ ಹಾಳೆಗಳನ್ನು ಒಂದು ದಾರದಿಂದ ಅವುಗಳ ಎರಡು ತುದಿಗಳಲ್ಲೂ ಇರುವ ಕಚ್ಚುಗಳ ಮೂಲಕ ಒಟ್ಟಿಗೆ ಸೇರಿಸುವಂತಿದೆ. ಮೊದಲ ಮಹಾಯುದ್ಧ ನಡೆಯುವುದಕ್ಕೆ ಸ್ವಲ್ಪ ಮೊದಲು, ಹಿರಿಯ ಅನ್ವೇಷಕರಾದ ಸರ್ ಆರೆಲ್ ಸ್ಟೈನ್ ಚೀನದ ಸಿಂಕಿಯಾಂಗ್ ಪ್ರಾಂತದಲ್ಲಿ ಮರದ ಹಾಳೆಗಳ ಮತ್ತು ತೆಳು ಹಲಗೆಗಳ ಒಂದು ಅಪಾರ ಸಂಗ್ರಹವನ್ನೇ ಪತ್ತೆ ಮಾಡಿದರು. ಬಗೆಬಗೆಯ ಭಾಷೆಗಳಲ್ಲಿ ಮತ್ತು ಲಿಪಿಗಳಲ್ಲಿ ಬರೆಯಲಾಗಿದ್ದ ಈ ಬರಹಗಳಲ್ಲಿ ಬಹಳಷ್ಟು ಅಧಿಕೃತ ದಾಖಲೆಗಳೂ ಆಗಿದ್ದುವು. ಅವುಗಳಲ್ಲಿ ಪತ್ರಗಳಿಗೆ ಸಂಬಂಧಪಟ್ಟಂತೆ ಪರಸ್ಪರ ಎದುರುಬದುರಾಗಿರುವ ಎರಡು ತೆಳುಹಲಗೆಗಳನ್ನೇ ಜೊತೆಗೂಡಿಸಿ ಕಟ್ಟುತ್ತಿದ್ದರು. ಬರವಣಿಗೆಯ ರಹಸ್ಯವನ್ನು ಕಾಪಾಡಿಕೊಳ್ಳುವ ಸಲುವಾಗಿ ಒಂದು ಹಲಗೆಯ ಹೊರಭಾಗದಲ್ಲಿರುವ ರಂಧ್ರದ ಮೇಲೆ ಜೇಡಿಮಣ್ಣಿನ ಮುದ್ರೆಯನ್ನು ಹಾಕಲಾಗುತ್ತಿತ್ತು.

ಬಿದಿರು

ಪ್ರಾಚೀನ ಚೀನದಲ್ಲಿ ಅತ್ಯಂತ ವ್ಯಾಪಕವಾಗಿ ಬಳಕೆಯಲ್ಲಿದ್ದ ಮತ್ತೊಂದು ಬರವಣಿಗೆ ಸಾಮಗ್ರಿಯೆಂದರೆ ಬಿದಿರು. ಮೇಲಿನಿಂದ ಕೆಳಗೆ ಬರೆಯುವ ಚೀನೀ ಬರವಣಿಗೆಗೆ ಬಿದಿರು ಪರ್ಯಾಯವಾದ ಕಾರಣವೆಂದರೆ ಅದರಗಳು ವಿನಾಕಾರ ಎಂಬುದಾಗಿ ಕೆಲವು ವಿದ್ವಾಂಸರು ಭಾವಿಸಿದ್ದಾರೆ. ಮೊದಲಿಗೆ ಬಿದಿರನ್ನು ಮುಖ್ಯವಾಗಿ ಆಡಳಿತದ ಉದ್ದೇಶಗಳಿಗಾಗಿ ಬಳಸತೊಡಗಿದರು. ಉದಾಹರಣೆಗೆ, ಒಂದು ಅಡಿ ಉದ್ದದ ಬಿದಿರಿನ ತುಂಡುಗಳು ಜನಗಣನ ಪಟ್ಟಿಗಳ ತಯಾರಿಕೆಯಲ್ಲಿ ಉಪಯೋಗಕ್ಕೆ ಬಂದುವು. ಅನಂತರ ಕಾಲ ಕಳೆದಂತೆ ಸಾಹಿತ್ಯಿಕ, ದಾರ್ಶನಿಕ ಹಾಗೂ ಇನ್ನಿತರ ರೀತಿಯ ಬರವಣಿಗೆಗಳಿಗಾಗಿ ಅದು ಬಳಕೆಯಾಗತೊಡಗಿತು. ಸುಮಾರು ಕ್ರಿ.ಪೂ. ೨೮೧ ರಷ್ಟು ಹಳೆಯದೆಂದು ಹೇಳಲಾದ ನಯವಾದ ಆಯತಾಕೃತಿಯ (rectangular) ಬಿದಿರಿನ ಪಟ್ಟಿಗಳು ದೊರೆತಿದ್ದು, ಆ ಕಾಲಕ್ಕಾಗಲೇ ಅವುಗಳ ಬಳಕೆ ಸಾಕಷ್ಟು ರೂಢಿಯಲ್ಲಿದ್ದಿರ ಬೇಕು. ಇವುಗಳ ಆಕೃತಿ ಮತ್ತು ಗಾತ್ರಗಳು ಬೇರೆಯಾಗಿದ್ದುವು. ಬರವಣಿಗೆಯ ಸಾಮಗ್ರಿ ತುಂಬ ಉದ್ದವಾಗಿದ್ದ ಪಕ್ಷದಲ್ಲಿ ಅನೇಕ ಬಿದಿರಿನ ತುಂಡುಗಳನ್ನು ರೇಶ್ಮೆ ದಾರದಿಂದ ಒಟ್ಟಿಗೆ ಸೇರಿಸಿ ಕಟ್ಟುತ್ತಿದ್ದರು. ಈ ರೀತಿಯ ಬಿದಿರಿನ ಪುಸ್ತಕಗಳು ತುಂಬ ಭಾರವಾಗಿರುತ್ತಿದ್ದುವು. ಹೀಗಾಗಿ ಉಪಯೋಗಿಸಲು ಕಷ್ಟವಾಗುತ್ತಿತ್ತು. ಅದರಲ್ಲೂ ಒಬ್ಬ ವಿದ್ವಾಂಸ ಪ್ರಯಾಣ ಹೊರಟನೆಂದರೆ ಅವನ ಗ್ರಂಥಗಳನ್ನು ಸಾಗಿಸಲು ಒಂದು ಗಾಡಿಯೇ ಬೇಕಾಗುತ್ತಿತ್ತು!



೨. ಬಿದಿರು : 'ಸುಮಾತ್ರ'ದಲ್ಲಿ ದೊರೆತ ೧೯ನೇ ಶತಮಾನದ ಒಂದು ಹಸ್ತ ಪ್ರತಿ. ನಾಲ್ಕು ಬಿದಿರಿನ ತುಂಡುಗಳನ್ನು ಒಟ್ಟಿಗೆ ಸೇರಿಸಿ ಒಂದು ಟೊಳ್ಳಾದ ಉರುಳೆ ಕೊಳವೆಯನ್ನು ಮಾಡಲಾಗಿದೆ. ಭಾರತೀಯ ಮೂಲವ ಲಿಪಿಯನ್ನು ಹೋಲುವಂತಿರುವ ಈ ಬರವಣಿಗೆ ಆಗ್ನೇಯ ಏಷಿಯದ ಲಿಪಿಯನ್ನು ಬಹಳಮಟ್ಟಿಗೆ ಆಧರಿಸಿರುವಂತಿದೆ. ಅಕ್ಷರಗಳನ್ನು ಚೂಪಾದ ಚಾಕುವಿನಿಂದ ಕೆತ್ತಿ, ಕಪ್ಪು ಹಚ್ಚಿ ಇನ್ನೂ ಸ್ಫುಟವಾಗಿ ಕಾಣುವಂತೆ ಮಾಡಿದ್ದಾರೆ

ಆಗ್ನೇಯ ಏಶಿಯದಲ್ಲಿ, ವಿಶೇಷತಃ ಸುಮಾತ್ರಾ ದ್ವೀಪದಲ್ಲಿ ಇಂದಿಗೂ ಬಿದಿರನ್ನು ಬರವಣಿಗೆಗಾಗಿ ಬಳಸುತ್ತಾರೆ. ಮೊದಲ ಕಾಲದಲ್ಲಿದ್ದಂತೆ ರಂಧ್ರವಿರುವ ಅಥವಾ ಇಲ್ಲದಿರುವ ಸಣ್ಣಪುಟ್ಟ ಹಾಳೆಯ ತುಂಡುಗಳ ರೂಪದಲ್ಲಿಯೊ, ಅಥವಾ ದಪ್ಪ ಹಾಳೆಗಳನ್ನು ಒಟ್ಟಿಗೆ ಸೇರಿಸಿ ಮಾಡಿದ ಟೊಳ್ಳು ಕೊಳವೆಯ ರೂಪದಲ್ಲಿಯೊ, ಅವುಗಳ ಉಪಯೋಗವಾಗುತ್ತಿತ್ತು. ಚೀನದಲ್ಲಿ ವಾಸ್ತವವಾಗಿ ಮಸಿ ಮತ್ತು ಕುಂಚದಿಂದ ಬರವಣಿಗೆಯ ಕೆಲಸ ಮಾಡುತ್ತಿದ್ದರು. ಆದರೆ ಸುಮಾತ್ರಾದಲ್ಲಿ ಅಕ್ಷರವನ್ನು ಕೆತ್ತಲು ಚೂಪಾದ ಚೂರಿಯನ್ನು ಬಳಸುತ್ತಿದ್ದರು.

ತಾಳೆಗರಿಗಳು:

ಭಾರತ ಮತ್ತು ಅದರ ಪ್ರಭಾವಕ್ಕೊಳಗಾದ ಆಗ್ನೇಯ ಏಶಿಯದ ರಾಷ್ಟ್ರಗಳಲ್ಲಿ ಮೊದಲಿನಿಂದಲೂ ತಾಳೆಗರಿ ಅತ್ಯಂತ ಜನಪ್ರಿಯವಾದ ಬರಹ ಸಾಮಗ್ರಿಯೆನಿಸಿದೆ. ಕ್ರಿ.ಶ. ಏಳನೆಯ ಶತಮಾನದಲ್ಲಿ ಭಾರತಕ್ಕೆ ಭೇಟಿ ಕೊಟ್ಟಿದ್ದ ಚೀನೀ ಯಾತ್ರಿಕ ಹ್ಯುಯೆನ್‌ತ್ಸ್ಯಾಂಗ್ ಅವುಗಳ ವ್ಯಾಪಕವಾದ ಬಳಕೆಯ ಬಗ್ಗೆ ಉಲ್ಲೇಖಿಸುತ್ತಾ ದಕ್ಷಿಣ ಭಾರತದ ಕೊಂಕಣಪುರದ ಬಳಿ ತಾಳೆಗರಿಗಳ ಒಂದು ಕಾಡೇ ಇತ್ತು, 'ಒಂದು ಬೌದ್ಧ ಸ್ತೂಪದ ಸುತ್ತಲೂ ಅದು ಆವರಿಸಿಕೊಂಡಿತ್ತು' ಎಂದಿದ್ದಾನೆ. ಆ ನಿರ್ದಿಷ್ಟವಾದ ಜಾಗ ಕಣ್ಣಿಗೆ ಬಿದ್ದಿಲ್ಲವಾದರೂ ಹ್ಯೂಯೆನ್‌ತ್ಸಾಂಗನ ಹೇಳಿಕೆಯಲ್ಲಿ ಸತ್ಯಾಂಶ ಇಲ್ಲದಿಲ್ಲ. ಬೌದ್ಧಮಠಗಳು ಪುಸ್ತಕಗಳನ್ನು ಹೊರತರುವ ಕೇಂದ್ರಗಳಾಗಿದ್ದವು, ಹಾಗಾಗಿ ಸುತ್ತಮುತ್ತಲಲ್ಲಿ ಸಾಕಷ್ಟು ಬರವಣಿಗೆ ಸಾಮಗ್ರಿಗಳನ್ನೊದಗಿಸುವ ಗಿಡಗಳನ್ನು ಬೆಳೆಯಿಸಿದ್ದರೆ ಆಶ್ಚರ್ಯವೇನಿಲ್ಲ. ಪ್ರಾಚೀನ ಈಜಿಪ್ಟಿನಲ್ಲಿ ಸಹ ಪೆಪಿರಸ್ ತೋಟಗಳನ್ನು ಬೆಳೆಸುವುದು ರೂಢಿಯಲ್ಲಿತ್ತು.

ತಾಳೆಗರಿಗಳನ್ನು ಮೊತ್ತಮೊದಲಿಗೆ ಯಾವಾಗ ಬಳಕೆಗೆ ತರಲಾಯಿತು ಎಂದು ಹೇಳುವುದು ಕಷ್ಟ. ಅದು ಸೂಕ್ಷ್ಮ, ಭಂಗುರದ ವಸ್ತುವಾಗಿದ್ದು ಹಸಿತನ ಮತ್ತು ಹುಳುಗಳ ದೆಸೆಯಿಂದ ಬೇಗ ಹಾಳಾಗಿ ಹೋಗುವಂಥದ್ದು. ಅತ್ಯಂತ ಪ್ರಾಚೀನ ತಾಳೆಗರಿಯ ನಮೂನೆಗಳು ಭಾರತದಿಂದ ಹೊರಗಡೆ, ಅಂದರೆ ಇನ್ನೂ ಉತ್ತಮ ವಾಯುಗುಣ ಪರಿಸ್ಥಿತಿಯುಳ್ಳ ಮಧ್ಯ ಏಶಿಯ (ಕ್ರಿ.ಪೂ. ೨ನೇ ಶತಮಾನ) ಹಾಗೂ ಜಪಾನುಗಳಲ್ಲಿ ದೊರೆಯಲು ಇದೂ ಒಂದು ಕಾರಣ. ಪ್ರಾಚೀನ ಹಸ್ತಪ್ರತಿಗಳನ್ನು ನಿರಂತರವಾಗಿ ಪ್ರತಿ ಮಾಡುವುದರಿಂದ ಹಾಗೂ ಲಿಪಿಕಾರ ಮತ್ತು ಆಶ್ರಯದಾತ ಇವರಿಬ್ಬರ ಸ್ತುತ್ಯ ಪ್ರಯತ್ನಗಳಿಂದಾಗಿ ಅವು ಹಾಳಾಗದೆ ಉಳಿದುಕೊಂಡು ಬಂದಿವೆ. ಬೌದ್ಧರು ಮತ್ತು ಜೈನರು ಕ್ರಿ.ಪೂ. ೬ನೇ

೬. ತಾಳೆಗರಿಗಳು/ಮರ : ಶ್ರೀಲಂಕೆಯ [illegible] ದೊರೆತ [illegible] ತಾಳೆಗರಿ ಹಸ್ತಪ್ರತಿ. ಆದರೂ ಮರದ ಚೌಕಟ್ಟುಗಳ ಮೇಲೆ [illegible] ಚಿತ್ರಗಳನ್ನು ಬರೆಸಿದ್ದರು. [illegible] ಚೌಕಟ್ಟುಗಳ ಮೇಲೆ [illegible] (Umpaka) [illegible] :

ಶತಮಾನದ ವೇಳೆಗೆ ತಮ್ಮ ಧರ್ಮಗ್ರಂಥಗಳನ್ನು ತಾಳೆಗರಿಯ ಮೇಲೆ ಬರೆಯುವುದನ್ನು ರೂಢಿ ಮಾಡಿಕೊಂಡಿದ್ದರು. ಹಿಂದೂ ಬ್ರಾಹ್ಮಣ ಪುರೋಹಿತ ವರ್ಗದವರು ಜಾತಿ ಪದ್ಧತಿಯಲ್ಲಿ ಜ್ಞಾನ ಭಂಡಾರದ ತಮ್ಮ ಏಕಸ್ವಾಮ್ಯಕ್ಕೆ ಧಕ್ಕೆ ಬರುತ್ತದೆಂಬ ಭಯ ವಿದ್ದರೂ, ತಮ್ಮ ಧರ್ಮಗ್ರಂಥಗಳನ್ನು ದಾಖಲಿಸಬೇಕಾಯಿತು (ಚಿತ್ರ ೪). ಏಕೆಂದರೆ ಅಪಾರವಾಗಿ ಹೊರಬಂದ ಟೀಕೆಗಳು, ವ್ಯಾಖ್ಯಾನಗಳು ಮನುಷ್ಯನ ಜ್ಞಾಪಕಶಕ್ತಿಯ ಎಲ್ಲೆಕಟ್ಟನ್ನು ಮೀರಿ ಬೆಳೆದು ನಿಂತಿದ್ದುವು. ಕ್ರೈಸ್ತ ಪಂಚಾಂಗದ ಪ್ರಕಾರ ಮೊದಲ ಸಹಸ್ರ ವರ್ಷಗಳಲ್ಲಿ ಆಗ್ನೇಯ ಏಶಿಯದಾದ್ಯಂತ ಒಂದು ರೀತಿಯ ಹೊರಗಿನ ಸಾಂಸ್ಕೃತಿಕ ಪ್ರಭಾವ ಬೀಳತೊಡಗಿತು. ಭಾರತದ ಬರವಣಿಗೆಯ ಪದ್ಧತಿ, ಭಾರತದಲ್ಲಿ ಬಳಕೆ ಯಾಗುತ್ತಿದ್ದ ಮಾದರಿಯ ಬರವಣಿಗೆಯ ಸಾಮಗ್ರಿಗಳು ಜನಪ್ರಿಯವಾದವು. ಆದರೆ ಸ್ಥಳೀಯ ಪದ್ಧತಿಗಳಿಗನುಸಾರವಾಗಿ ಅರಗಿನ ಮೆರಗು, ಚಿನ್ನ, ಬೆಳ್ಳಿ ಮುಂತಾದವುಗಳಿಂದ ಮಾಡುತ್ತಿದ್ದ ಅಲಂಕರಣವು ಸರಳವಾಗಿದ್ದ ತಾಳೆಗರಿಗೆ ನಿಜಕ್ಕೂ ಆಡಂಬರದ ಚೌಕಟ್ಟನ್ನು ಒದಗಿಸಿತು. ಅನೇಕ ವೇಳೆ ಅದು ಬೇರೆಯದೋ ಏನೋ ಎಂಬಂತೆ ಕಂಡು ಬರುತ್ತಿತ್ತು.

ಮೂರು ಬಗೆಯ ತಾಳೆಗರಿಗಳು ಬರವಣಿಗೆಗೆ ಅಗತ್ಯವಾದ ಸಾಮಗ್ರಿಯನ್ನು ಒದಗಿಸುತ್ತಿದ್ದವು. ಅವು ಯಾವುದೆಂದರೆ :

'ಬೋಧಿಸತ್ತ್ವ ಒಮ್ಮೆ ಸಿವಿಯಾಗಿ ಹುಟ್ಟಿದ. ಅವನು ಚೆನ್ನಾಗಿ ರಾಜ್ಯವಾಳುತ್ತಿದ್ದ. ಪ್ರತಿದಿನವೂ ಭಿಕ್ಷೆ ನೀಡುತ್ತಿದ್ದ..... ಒಂದು ದಿನ ಯಾರಾದರೂ ಯಾಚಕರಿಗೆ ತನ್ನ ದೇಹದಿಂದ ಅವರು ಬೇಡುವ ಭಾಗವನ್ನು ತೆಗೆದುಕೊಡಬೇಕೆಂಬ ಬಯಕೆ ಅವನಲ್ಲಿ ಉಂಟಾಯಿತು. ಅವನ ಮನದ ಇಂಗಿತವನ್ನು ಅರಿತ ಸಕ್ಕ ಒಬ್ಬ ಕುರುಡ ಬ್ರಾಹ್ಮಣನ ವೇಷ ತಾಳಿ ಅವನ ಮುಂದೆ ಪ್ರತ್ಯಕ್ಷನಾದ, ಕಣ್ಣುಗಳು ಬೇಕೆಂದು ಕೇಳಿದ. ರಾಜ ಕಣ್ಣು ಗಳನ್ನು ಕೊಡಲು ಒಪ್ಪಿದ. ವೈದ್ಯ ನಿವಕನಿಗಾಗಿ ಹೇಳಿಕಳುಹಿಸಿದ. ತನ್ನ ಬಂಧು ಬಾಂಧವರ ಮತ್ತು ಪ್ರಜೆಗಳ ಪ್ರತಿಭಟನೆ ಗೋಳಾಟಗಳನ್ನು ಲೆಕ್ಕಿಸದೆ ಸಿವಿ ತನ್ನ ಕಣ್ಣುಗಳನ್ನು ಕೀಳಿಸಿ ಬ್ರಾಹ್ಮಣನಿಗೆ ದಾನವಾಗಿ ಕೊಟ್ಟ..... ಕಣ್ಣು ಕಿತ್ತ ಗಾಯ ಗುಣವಾದ ಮೇಲೆ ಸಿವಿ ಸಂನ್ಯಾಸಿಯಾಗಬೇಕೆಂದು ಬಯಸಿ ಅನುಚರನೊಬ್ಬನೊಡನೆ ಅರಣ್ಯಾಭಿಮುಖವಾಗಿ ಹೊರಟ. ಇದರಿಂದ ಸಕ್ಕನ್ ಸಿಂಹಾಸನದಲ್ಲಿ ಬಿಸಿಯೆದ್ದಿತು. ಸಿವಿಯ ಮುಂದೆ ಪ್ರತ್ಯಕ್ಷ ನಾಗಿ ಅವನು ಏನಾದರೂ ಕೇಳಿಕೊ ಅಂತ ಹೇಳಿದ. ರಾಜ ತಾನು ಸಾಯಬೇಕೆಂದು ವರ ಬೇಡಿದ. ಆದರೆ ಬೇರೆ ಏನನ್ನಾದರೂ ಕೇಳಿಕೊ ಅಂತ ಸಕ್ಕ ಹೇಳಿದ. ಆಗ ರಾಜ ತನಗೆ ದೃಷ್ಟಿಯನ್ನು ಹಿಂತಿರುಗಿಸುವಂತೆ ಕೇಳಿಕೊಂಡ .... ಕಣ್ಣುಗಳು ಮತ್ತೆ ಬಂದವು .... ಸಿವಿ ತನ್ನ ಪೂಜೆಗಳೊಡಗೂಡಿ ಸಿಂಹಾಸನಾರೂಢನಾಗಿ ಅವರಿಗೆಲ್ಲ ದಾನದ ಮಹಿಮೆಯನ್ನು ಬೋಧಿಸಿದ...... ಹಸ್ತಪ್ರತಿಯ ವಿಷಯ 'ಬ್ರಹ್ಮಾಯು ಸೂತ್ರ ಸನ್ನಯ'ಕ್ಕೆ ಸೇರಿದ್ದು ಡಿತ್ರಗಳಿಗೂ ಅದಕ್ಕೂ ಯಾವ ಸಂಬಂಧವೂ ಇಲ್ಲ.'

೧. ತಾಲಿಪಟ್ ತಾಳೆಗರಿ (Corypha umbraculifera)

೨. ಪಾಲ್ಮಿರಾ ತಾಳೆಗರಿ (Borassus Flabellifer)

೩. ಆಗ್ನೇಯ ಏಶಿಯದಲ್ಲಿ ವಿಶೇಷವಾಗಿದ್ದ ಲಾಂಟಾರ್ ತಾಳೆಗರಿ - (Corypha utan)- ತಾಳೆಗರಿಗಳು ತಮ್ಮ ನೈಸರ್ಗಿಕ ಸ್ಥಿತಿಯಲ್ಲಿ ಮಧ್ಯದಲ್ಲಿ ಅಗಲವಾಗುತ್ತಾ, ಕೊನೆಯಲ್ಲಿ ಚೂಪಾಗುತ್ತಾ ಹೋಗುತ್ತವೆ. ಪಾಲಿಪಟ್ ಎಲೆಗಳು ಉದ್ದವಾಗಿದ್ದು ಅಗಲವಾಗಿದ್ದು ಮಧ್ಯದಲ್ಲಿ ಅಡ್ಡಡ್ಡವಾಗಿ ಒಂದು ಗೆರೆ ಹರಿದಿರುತ್ತದೆ. ಪಾಲ್ಮಿರಾ ಎಲೆ ಬಹಳ ಹೆಚ್ಚೆಂದರೆ ಒಂದೂವರೆ ಅಂಗುಲಗಳಷ್ಟು ಅಗಲವಾಗಿದ್ದು ಒಂದು ರೀತಿಯ ಸ್ವಲ್ಪ ಉಬ್ಬು ಮೇಲ್ಮೈಯನ್ನು ಹೊಂದಿರುತ್ತದೆ. ಲಾಂಟಾರ್ ಎಲೆಗಳು ಇನ್ನೂ ಶ್ರೇಷ್ಠಮಟ್ಟದ್ದೆಂದು ತೋರುತ್ತದೆ.

ಬರೆಯಲು ಯೋಗ್ಯವಾಗುವಂತೆ ತಾಳೆಗರಿಗಳನ್ನು ಸಂಸ್ಕರಿಸುವುದು ಕಷ್ಟಕರವಲ್ಲ. ಪ್ರತಿಯೊಂದು ಎಲೆಯನ್ನು ಮಧ್ಯದ ಕಾಂಡದಿಂದ ಕಿತ್ತು, ಸರಿಯಾದ ಆಕಾರಕ್ಕೆ ಕತ್ತರಿಸಿ, ನೆನೆಹಾಕಿ, ಕುದಿಸಿ (ಹಾಲು ಅಥವಾ ನೀರಿನಲ್ಲಿ) ಮತ್ತೆ ಮತ್ತೆ ಒಣಗಿಸಿ ಕಡೆಯಲ್ಲಿ ನಯವಾಗುವಂತೆ ಕವಡೆ ಚಿಪ್ಪಿನಿಂದಲೊ ಅಥವಾ ನುಣುಪಾದ ಕಲ್ಲಿನಿಂದಲೊ ಉಜ್ಜಬೇಕು. ಹಸ್ತಪ್ರತಿಯ ಪ್ರತಿಯೊಂದು ಹಾಳೆಯನ್ನೂ ಎರಡು ಮರದ ಕಟ್ಟುಗಳ ನಡುವೆ ಸೇರಿಸಿ ಒಂದು ಕಡೆ ಅಥವಾ ಎರಡು ಕಡೆ ದಾರದಿಂದ ಪೋಣಿಸಿ ಅನಂತರ ಅದೇ ದಾರವನ್ನು ಇಡೀ ಗ್ರಂಥದ ಸುತ್ತಲೂ ಸುತ್ತುತ್ತಿದ್ದರು. ಈ ಕಟ್ಟುಗಳನ್ನು ಶ್ರೀಲಂಕಾದಲ್ಲಿ ಸಾಧಾರಣ ಮರದಿಂದಲೂ, ಆಗ್ನೇಯ ಏಷ್ಯಾದಲ್ಲಿ ಕೆಲವು ವೇಳೆ ದಂತ, ಚಿನ್ನ ಮತ್ತು ಬೆಳ್ಳಿಯಿಂದಲೂ ತಯಾರಿಸುತ್ತಿದ್ದರು. ಹಸ್ತಪ್ರತಿಯನ್ನು ಬರೆಯಿಸುವ ವ್ಯಕ್ತಿಯ ಅಥವಾ ಆಶ್ರಯದಾತನ ಐಶ್ವರ್ಯ ಇಲ್ಲವೆ ಸ್ಥಿತಿವಂತಿಕೆಯನ್ನು ಇದು ಮುಖ್ಯವಾಗಿ ಅವಲಂಬಿಸುತ್ತಿತ್ತು.

ತಾಳೆಗರಿಯ ಆಕಾರವು ಇತರ ಬರವಣಿಗೆಯ ಸಾಮಗ್ರಿಗಳ ಮೇಲೂ ಪ್ರಭಾವ ಬೀರಿದೆ. ಉದಾಹರಣೆಗೆ, ಜಮೀನನ್ನು ದಾನವಾಗಿ ನೀಡಿದ ಸಂದರ್ಭದಲ್ಲಿ ಕೊಡಲಾದ ತಾಮ್ರಪತ್ರಗಳು ಬಹಳಮಟ್ಟಿಗೆ ಇದೇ ಆಕಾರದಲ್ಲಿದ್ದು ತಾಮ್ರದ ಹಾಳೆಗಳನ್ನು ಲೋಹದ ಉಂಗುರದಿಂದ ಪೋಣಿಸುತ್ತಿದ್ದರು. ಲಿಪಿಕಾರರು ದಾರಪೋಣಿಸಲೆಂದು ಮೊದಲು ಬಿಡುತ್ತಿದ್ದಂತೆಯೆ ಖಾಲಿ ಜಾಗವನ್ನು ಈಗಲೂ ಬಿಡತೊಡಗಿದರು. ಆದರೆ ಇದರಿಂದ ನಿರ್ದಿಷ್ಟ ಪ್ರಯೋಜನವೇನೂ ಇಲ್ಲದುದರಿಂದ, ಬರಬರುತ್ತಾ ಇದು ಅಂಚುಗಳಿಗೆ ಅಲಂಕರಣ ಮಾಡಲು ಅವಕಾಶ ಒದಗಿಸಿತು. ತಾಳೆಗರಿಯ ಮೇಲ್ಮೈ ಭಾರತ ಮತ್ತು

ಆಗ್ನೇಯ ಏಶಿಯದ ಅನೇಕ ಲಿಪಿಗಳ ವಿನ್ಯಾಸವನ್ನು ರೂಪಿಸಲು ಕಾರಣವಾಯಿತು. ಭಾರತೀಯ ಲಿಪಿಗಳಿಗೆ ಆಕರವಾದ ಬ್ರಾಹ್ಮೀ ಲಿಪಿಯಲ್ಲಿ ಅಕ್ಷರಗಳು ಉದ್ಭುದ್ಧವಾಗಿದ್ದು ಮೇಲೆ ಬೆಣೆಯಾಕಾರವಿರುತ್ತದೆ. ಈ ಬೆಣೆಯಾಕಾರವೇ ಕೊನೆಗೆ ಒಂದು ಉದ್ದದ ಗೀಟಾಯಿತು. ಮುಂದೆ ಬಳಕೆಗೆ ಬಂತು. ಮತ್ತು ಒಂದು ಪದದಲ್ಲಿರುವ ಎಲ್ಲ ಅಕ್ಷರಗಳನ್ನು ಸೇರಿಸುವಂತಾಯಿತು. ಈ ಗೀಟನ್ನು ಸಂಸ್ಕೃತದಲ್ಲಿ ಇಡೀ ವಾಕ್ಯದಲ್ಲಿರುವ ಪದಗಳಿಗೆಲ್ಲ ಒಟ್ಟಿಗೆ ಹಾಕಬಹುದಾಗಿದೆ. ಉತ್ತರ ಭಾರತದಲ್ಲಿ ಲಿಪಿಕಾರರು ಲೇಖನಿ ಮತ್ತು ಮಸಿಯನ್ನು ಬಳಸುತ್ತಿದ್ದುದರಿಂದ ಈ ರೀತಿ ಬರೆಯುವಲ್ಲಿ ಸಮಸ್ಯೆ ಇರಲಿಲ್ಲ. ಆದರೆ ದಕ್ಷಿಣ ಭಾರತದಲ್ಲಿ ಲಿಪಿಕಾರರು ಚೂಪಾದ ಲೋಹದ ಮೊನೆಯುಳ್ಳ ಲೇಖನಿಯಿಂದ (ಕಂಟದಿಂದ) ಅಕ್ಷರಗಳನ್ನು ಕೆತ್ತುವ ಪರಿಪಾಠವನ್ನು ಬೆಳೆಸಿಕೊಂಡಿದ್ದರಿಂದ ತಾಳೆಗರಿಯ ಉದ್ದಕ್ಕೂ ಗೆರೆಯನ್ನೇನಾದರೂ ಎಳೆದಿದ್ದ ಪಕ್ಷದಲ್ಲಿ ಆ ಗೆರೆ ಗರಿಯನ್ನೇ ಸೀಳಿ ನಾಶಪಡಿಸುತ್ತಿತ್ತೇನೋ. ಆದರೆ, ದಕ್ಷಿಣ ಭಾರತದ ಲಿಪಿಗಳೆಲ್ಲ ಗುಂಡನೆಯ ಆಕಾರವುಳ್ಳದ್ದಾಗಿದ್ದು ಪದದಲ್ಲಿ ಬರುವ ಅಕ್ಷರಗಳನ್ನು ಸೇರಿಸುವ ಗೀಟನ್ನು ಎಳೆಯುತ್ತಿರಲಿಲ್ಲ. ಕ್ರಿ.ಪೂ. ನಾಲ್ಕನೇ ಶತಮಾನದಲ್ಲಿ ಆಗ್ನೇಯ ಏಶಿಯದಲ್ಲಿ ಬರವಣಿಗೆ ದಕ್ಷಿಣ ಭಾರತದ ಪಲ್ಲವರ ನಿಮಿತ್ತದಿಂದ ಜಾರಿಗೆ ಬಂದಾಗ, ಈ ಪರಿಪಾಠ ಮುಂದುವರಿದಿರಲೂ ಸಾಧ್ಯ. ಬರ್ಮೀ ಭಾಷೆಯಲ್ಲಂತೂ ಲಿಪಿಯಲ್ಲಿ ವೃತ್ತಗಳ ಮತ್ತು ಅರ್ಧವೃತ್ತಗಳ ಸಾಲುಸಾಲನ್ನೇ ನೋಡಬಹುದು. ದಂತ, ಚಿನ್ನ, ಬೆಳ್ಳಿ ಅಥವಾ ಕಾಗದದಂತಹ ಬರವಣಿಗೆಯ ಸಾಮಗ್ರಿಗಳ ಮೇಲೆ ದುಂಡಾಗಿಯೆ ಬರೆಯುವುದರ ಅಗತ್ಯ ಇದ್ದಿರಲಿಲ್ಲವಾದರೂ ಆ ಕ್ರಮ ಮುಂದುವರಿಯಿತು.

ಅರಳಿ ಎಲೆ

ತೀರ ಪ್ರಾಚೀನ ಬರಹ ಸಾಮಗ್ರಿಗಳಲ್ಲಿ ಸಾಧಾರಣವಾದ ಎಲೆಗಳೂ ಇದ್ದಿರಬಹುದೆಂಬ ಊಹೆ ಇದೆ. ಆದರೆ ಸರಿಯಾಗಿ ಸಂಸ್ಕರಿಸದೆ ಹೋದ ಎಲೆಗಳು ಅಲ್ಪ ಕಾಲ ಮಾತ್ರವೆ ಉಳಿದು ನಾಶಹೊಂದುತ್ತವೆ ಎಂಬ ಕಾರಣದಿಂದ ಈ ವಾದಕ್ಕೆ ಪುಷ್ಟಿ ದೊರೆಯುತ್ತಿಲ್ಲ. ಆದರೆ ಅರಳಿ ಎಲೆಗಳನ್ನು (Ficus religiosa) ಭಾರತದಲ್ಲಿ ಮತ್ತು ಚೀನದಲ್ಲಿ ಹಿಂದೂ ಹಾಗೂ ಬೌದ್ಧ ಸಂತರ ಚಿತ್ರಗಳನ್ನು ಬರೆಯಲು ಬಳಸುತ್ತಿದ್ದರೆಂಬ ಅಂಶ ಕುತೂಹಲಕರವಾಗಿದೆ. ೧೯ನೇ ಶತಮಾನದ ಕೆಲವು ಬೌದ್ಧ ಕೃತಿಗಳು ಈ ರೀತಿಯಲ್ಲಿ ಅಲಂಕೃತವಾಗಿರುತ್ತಿದ್ದವು.

ತೊಗಟೆ

ತಾಳೆಗರಿಯಂತೆ ಸ್ವಲ್ಪ ಸಂಸ್ಕರಿಸಿ ಬಳಸಬಹುದಾದ ಮತ್ತೊಂದು ಬರಹದ ಸಾಮಗ್ರಿ ಅಂದರೆ ಮರದ ಒಳತೊಗಟೆ. ಭಾರತದಲ್ಲಿ ಎರಡು ವಿಧದ ತೊಗಟೆಯನ್ನು ಈ ಉದ್ದೇಶಕ್ಕಾಗಿ ಬಳಸುತ್ತಿದ್ದರು. ಭಾರತದ ವಾಯವ್ಯ ಭಾಗದ ಹಿಮಾಲಯ ಪರ್ವತ ಪ್ರದೇಶದಲ್ಲಿ ದೊರೆಯುವ ಭೂರ್ಜಪತ್ರ (Betula utilis) ಮತ್ತು ಈಶಾನ್ಯದಲ್ಲಿ ಲೋಳಿಸರ (Aquiloria agallocha) ಇವುಗಳನ್ನು ಉಪಯೋಗಿಸುತ್ತಿದ್ದರು. ಭೂರ್ಜದ ತೊಗಟೆಯ ಮೊದಲ ಹಾಳೆಗಳು ನಮಗೆ ಕ್ರಿಸ್ತ ಶತಕದ ಪ್ರಾರಂಭ ಕಾಲಕ್ಕೆ ಸೇರಿದಂತೆ ದೊರೆಯುತ್ತವೆ. ಈ ಹಾಳೆಗಳನ್ನು ಕತ್ತರಿಸಿ, ನುಣುಪು ಮಾಡಿ ಎಣ್ಣೆ ಸವರುತ್ತಿದ್ದರು. ಹೀಗೆ ದೊರೆತಿರುವುವು ಕೆಲವು ಬೌದ್ಧ ಕೃತಿಗಳ ಪಳೆಯುಳಿಕೆಗಳು. ಅಲೆಕ್ಸಾಂಡರ್ ಭಾರತಕ್ಕೆ ದಂಡೆತ್ತಿ ಬರುವ ವೇಳೆಗೇನೇ (ಕ್ರಿ. ಪೂ.೩೨೬) ಭೂರ್ಜದ ತೊಗಟೆಯನ್ನು ಬಳಸಲಾಗುತ್ತಿತ್ತೆಂದು ನಂಬಲು ಆಧಾರಗಳಿವೆ. ಅಗಲ ಕಡಮೆಯಾಗಿದ್ದು ಉದ್ದುದ್ದವಾಗಿರುವ ಕೆಲವು ಇಂಥ ಹಸ್ತಪ್ರತಿಗಳ ಆಕಾರವನ್ನು ನೋಡಿದರೆ ಇವುಗಳಿಗೂ ಗ್ರೀಕರ ಪೆಪಿರಸ್ ಸುರುಳಿಗಳಿಗೂ ಸಂಬಂಧವಿದ್ದಿತೆ - ಎಂದು ಆಲೋಚಿಸುವಂತಾಗುತ್ತದೆ. ಆದರೆ ಈಗ ದೊರೆತಿರುವ ಭೂರ್ಜದ ತೊಗಟೆಯ ಹಸ್ತಪ್ರತಿಗಳಲ್ಲಿ ಬಹುಪಾಲು ತಾಳೆಗರಿಯ ಮಾದರಿಯನ್ನೇ ಹೋಲುತ್ತವೆ. ಹಾಳೆಗಳನ್ನು ಮಡಿಚಿ, ಮೊದಲ ಎರಡು ಮಡಿಕೆಗಳನ್ನು ನಾಲ್ಕು ಮಡಿಕೆಗಳನ್ನಾಗಿ ಮಾಡಿ, ಅನಂತರ ಪುಸ್ತಕದ ಆಕಾರದಲ್ಲಿ ಮಾಡುವ ವಿಧಾನ ಆಮೇಲೆ ಬಳಕೆಗೆ ಬಂತು. ಕಾಶ್ಮೀರದಲ್ಲಿ ಒಂದು ವಿಶಿಷ್ಟವಾದ ತಾಳಿಕೆಯುಳ್ಳ, ಉದ್ದುದ್ದಕ್ಕೆ ಇದ್ದ ಸಾಮಗ್ರಿ ದೊರೆಯುತ್ತಿದ್ದು ಭೂರ್ಜಪತ್ರವು ಸಂಪೂರ್ಣವಾಗಿ ಭಾರತೀಯವೇ ಆಗಿತ್ತು. ಭೂರ್ಜದ ತೊಗಟೆಯ ಮೇಲೆ ಬರೆದ ಸಂಸ್ಕೃತ ಗ್ರಂಥಗಳಿಗೆ ಬಹಳ ಅಪರೂಪವಾಗಿ ಚರ್ಮದ ಹೊದಿಕೆಗಳನ್ನು ಹಾಕಿರುತ್ತಿದ್ದರು. ಅಸ್ಸಾಮೀ ಹಸ್ತಪ್ರತಿಗಳ ಹಾಳೆಗಳನ್ನು ಕೆಲವು ವೇಳೆ ಮರದ ತೆಳುವಾದ ಪದರುಗಳ ನಡುವೆ ಸೇರಿಸಿ ಭದ್ರಪಡಿಸಿ ಅವು ಹೆಚ್ಚು ಕಾಲ ಬಾಳಿಕೆ ಬರುವಂತೆ ಮಾಡುತ್ತಿದ್ದರು. ಈ ಸಂಸ್ಕರಣದಿಂದಾಗಿ ಅವುಗಳ ಹೊರ ಆಕಾರವೇ ಬದಲಾದಂತಾಗಿ ನೋಡಲು ಮರದ ಹಲಗೆಗಳಂತೆ ಕಾಣುತ್ತಿದ್ದವು.



೪. **ತೊಗಟೆ** : ಸಂಪ್ರದಾಯಸ್ಥ ಸಂಸ್ಕೃತ ಗ್ರಂಥವೊಂದರ ಕಾಶ್ಮೀರಿ ಭೂರ್ಜ ತೊಗಟೆಯ ಹಸ್ತಪ್ರತಿ. ೧೬/೧೭ನೆಯ ಶತಮಾನಕ್ಕೆ ಸೇರಿರುವ ಇದನ್ನು ಚರ್ಮದ ಹೊದಿಕೆಯಲ್ಲಿಟ್ಟಿದೆ. ಭೂರ್ಜದ ಪತ್ರ ಬೇಗ ಚೂರಾಗುವಂತಿದ್ದು ಪ್ರತಿಯೊಂದು ಹಾಳೆಯೂ ಜೀರ್ಣವಾಗುವ ರೀತಿಯಲ್ಲಿವೆ. ಸಾಕಷ್ಟು ಕೌಶಲದಿಂದ ಸಂರಕ್ಷಿಸುವ ಪ್ರಯತ್ನ ನಡೆಸಿದ ಮೇಲೆ ಮಾತ್ರ ಈ ಕೃತಿಯನ್ನು ಮತ್ತೆ ಉಪಯೋಗಿಸಬಹುದಾಗಿದೆ.

೫. **ತೊಗಟೆ/ಮರ/ಬಿದಿರು** : ಸುಮಾತ್ರದ ಬಾಟಕ್ ವೈದ್ಯರು ಬಳಸುತ್ತಿದ್ದ ಪ್ರಾರ್ಥನೆ, ರೋಗ ಮತ್ತು ಭವಿಷ್ಯ ರಾಶಿಯ ಪುಸ್ತಕ. ಮರದ ಒಳತೊಗಟೆಯನ್ನು ಉದ್ದುದ್ದಕ್ಕಾಗಿ ಕತ್ತರಿಸಿ, ಅನಂತರ ಅಕಾರ್ಡಿಯನ್ ವಾದ್ಯದಂತೆ ಮಡಿಚಲಾಗಿದೆ. ಬರವಣಿಗೆ ಕೆಲಸವನ್ನು ಕಪ್ಪು ಮತ್ತು ಕೆಂಪು ಶಾಯಿಯಿಂದ ಮಾಡಿದ್ದಾರೆ. ಇಂಥ ಬಹಳಷ್ಟು ಪುಸ್ತಕಗಳನ್ನು (ಸಂಸ್ಕೃತ 'ಪುಸ್ತಕ'ದಿಂದ ಹುಟ್ಟಿದ) ಮರದ ಹೊದಿಕೆಗಳಿಂದ ಸುತ್ತಿ ಸ್ವಲ್ಪ ಉಬ್ಬು ಕೆತ್ತನೆಯಿಂದ ಅಲಂಕರಿಸಿದ್ದಾರೆ. ನೇಯ್ದ ಅಥವಾ ಜಡೆಗಟ್ಟಿದ ಬಿದಿರಿನ ದಾರದಿಂದ ಹಾಳೆಗಳನ್ನು ಸೇರಿಸಿದ್ದಾರೆ. ಬುಡಕಟ್ಟುಗಳ ನಡುವೆ ಯುದ್ಧ ನಡೆದಾಗ ವೈದ್ಯರಿಗೆ ಬೇಡಿಕೆ ಕೂಟ ಮಹತ್ವ ದೊರೆಯುತ್ತಿತ್ತು. ಅವರ ಹಸ್ತ ವೈದ್ಯಗ್ರಂಥಗಳು ಅವರನ್ನು ಬೇರೆ ಸ್ಥಳಕ್ಕೆ ಕೊಂಡೊಯ್ಯುವ ರಹದಾರಿ ಪತ್ರಗಳಂತಿರುತ್ತಿದ್ದವು. ಇಲ್ಲಿ ಕೊಟ್ಟ ಹಾಳೆ ಹತ್ತೊಂಬತ್ತನೆ ಶತಮಾನಕ್ಕೆ ಸೇರಿರುವುದಾದರೂ 'ಪುಸ್ತಕ'ಗಳನ್ನು ಬಳಸುವ ಪರಿಪಾಠ ಸುಮಾತ್ರದಲ್ಲಿ ಇನ್ನೂ ಸಂಪೂರ್ಣವಾಗಿ ನಿಂತು ಹೋಗಿಲ್ಲ.



೬. ತಾಳೆಗರಿಯ ಮೇಲೆ ಬರೆಯುವ ವಿವಿಧ ವಿಧಾನಗಳು

(ಅ) ಮಸಿ : 'ಅಷ್ಟ ಸಾಹಸ್ರಿಕಾ ಪ್ರಜ್ಞಾಪಾರಮಿತಾ' ಸೂತ್ರ. ೮೦೦೦ ಭಾಗಗಳ ಲ್ಲಿರುವ ಇದುಪರಿಪೂರ್ಣ ವಿವೇಕವನ್ನು ಸಂಪಾದಿಸುವ ಮಾರ್ಗವನ್ನು ತಿಳಿಸುತ್ತದೆ. ಮಹಾಯಾನ ಬೌದ್ಧ ಸಂಪ್ರದಾಯದ ಮಧ್ಯಮಕ ಪಂಥಕ್ಕೆ ಸೇರುವ ಅತ್ಯಂತ ಆದ್ಯಗ್ರಂಥ ಗಳಲ್ಲಿ ಇದೂ ಒಂದು. ಸಂಸ್ಕೃತದಲ್ಲಿದೆ. ಬಿಹಾರದಲ್ಲಿ ಸುಮಾರು ಕ್ರಿ.ಪೂ. ೯೭೦ರಲ್ಲಿ ದೊರೆತದ್ದು.

(ಆ) ಚೂಪು ಲೇಖನಿ : ಭಾಗವತ ಪುರಾಣ ಪ್ರಸಂಗ. ಸಂಸ್ಕೃತ ಭಾಷೆ ಮತ್ತು ಒರಿಯಾ ಲಿಪಿಯಲ್ಲಿದೆ. ಕ್ರಿ. ಶ. ೧೭ನೇ ಶತಮಾನಕ್ಕೆ ಸೇರಿದುದು.

(ಇ) ಬಣ್ಣ : ಬೌದ್ಧ ಸನ್ಯಾಸಿಗಳ ರೀತಿನೀತಿಗಳಲ್ಲಿ ನಿಯಮಾವಳಿಯನ್ನು ಕುರಿತ ಕಮ್ಮವಾಚಾ ಗ್ರಂಥದ ಮೊದಲ ಅಧ್ಯಾಯ. ಪಾಲಿ ಭಾಷೆಯಲ್ಲಿ ಬರ್ಮಿ ಲಿಪಿಯಲ್ಲಿ ಚಿನ್ನದ ಮುಲಾಮು ಮಾಡಿದ ತಾಳೆಗರಿಯ ಮೇಲೆ ಬರೆಯಲಾಗಿದೆ. ಕ್ರಿ. ಶ. ೧೯ನೇ ಶತಮಾನ.

೭. ಬೇರೆ ಬೇರೆ ಸಾಮಗ್ರಿಗಳಲ್ಲಿ ತಾಳೆಗರಿಯ ಆಕಾರ

(ಅ) ಹತ್ತಿ : ಕಪ್ಪು ಪಾಟಾದ ಮೊದಲ [illegible] ವರ್ಗ [illegible] ಅಕ್ಷರಗಳಲ್ಲಿ [illegible] ಪಾಟಯ ಪತ್ರವನ್ನು ಬರೆಯಲಾಗಿದೆ. ಹತ್ತಿಯ ಬಟ್ಟೆಯನ್ನು ತಾಳೆಗರಿಯ ಆಕಾರದಲ್ಲಿ ಕತ್ತರಿಸಿ ಕಪ್ಪು ಬಳಿದು ಗಟ್ಟಿಯಾಗಿ ಮಾಡಲಾಗಿದೆ. ಅಕ್ಷರಗಳನ್ನು [illegible] ರೀತಿಯ [illegible] ಬರೆಯಲಾಗಿದೆ.

(ಆ) ತಾಮ್ರ : 'ಗ್ರಂಥಮ್' ಅಕ್ಷರಗಳಲ್ಲಿ ಮತ್ತು ತಮಿಳುವಟ್ಟೆಯುತ್ತು ಅಕ್ಷರಗಳಲ್ಲಿ ಬರೆದಿರುವ ಗ್ರಂಥ- ತಮಿಳುನಾಡಿನ ವೆಳ್ವಿಕ್ಕುಡಿ [illegible] ಹಳ್ಳಿಯನ್ನು ದಾನವಾಗಿ ನೀಡಿದ ತಾಮ್ರ [illegible] (ಭಾರತ). ಕ್ರಿ. ಶ. ೭೬೯/೭೦.

(ಇ) ಕಾಗದ : ಕಲ್ಪಸೂತ್ರ : ಜೈನಧರ್ಮ ಪ್ರವರ್ತಕರ ಜೀವನವನ್ನು [illegible] ಗ್ರಂಥ. ತಾಳೆಗರಿಯನ್ನು ಬಳಸುತ್ತಿದ್ದ ಸಂದರ್ಭದಲ್ಲಿ [illegible] ಮಾಡುತ್ತಿದ್ದ ರಂಧ್ರಗಳಿಗೆ ಪ್ರತೀಕವಾಗಿ ಚಿತ್ರದಲ್ಲಿ ಕೆಂಪು ಚುಕ್ಕೆಗಳನ್ನು [illegible]. ಗುಜರಾತ್ [illegible] ಕ್ರಿ. ಶ. [illegible]



೮. ಮಡಿಚುವ ಪುಸ್ತಕಗಳು

(ಅ) ಥೈಲೆಂಡ್ : ಚಿತ್ರಗಳಿಂದ ಕೂಡಿದ ೧೯ನೇ ಶತಮಾನದ ಖಗೋಳ ಶಾಸ್ತ್ರೀಯ ಗ್ರಂಥ. ಯಾವುದೇ ದಂಪತಿಗಳು ಹುಟ್ಟಿದ ತಿಂಗಳುಗಳ ಆಧಾರದ ಮೇಲೆ ವೈವಾಹಿಕ ಜೀವನದ ಭವಿಷ್ಯವನ್ನು ಚಿತ್ರಗಳು ತೋರಿಸುತ್ತವೆ.

(ಆ) ಭಾರತ : ಮೈಸೂರಿನಲ್ಲಿ ವ್ಯಾಪಾರಿಗಳು ೧೮-೧೯ ಶತಮಾನಗಳಲ್ಲಿ ಬಳಸುತ್ತಿದ್ದ 'ಕಡತ'ದಲ್ಲಿಯ ಲೆಕ್ಕದ ಪುಸ್ತಕ. ಬಟ್ಟೆಯ ತುಂಡುಗಳನ್ನು ಜೋಡು ಹಾಗಿ ಮಾಡಿ, ಕಪ್ಪು ಹಚ್ಚಿ, ಅಕಾರ್ಡಿಯನ್ ವಾದ್ಯದ ರೀತಿಯಲ್ಲಿ ಮಡುಚುತ್ತಿದ್ದರು.

ಜೇಡಿಮಣ್ಣು

ಜೇಡಿಮಣ್ಣಿನ ಫಲಕಗಳನ್ನು ಸೂಕ್ತವಾದ ಬರವಣಿಗೆ ಸಾಧನವಾಗಿ ಬಳಸಲು ಆರಂಭಿಸಿದವರು ಪಶ್ಚಿಮ ಏಶಿಯದ ಜನರು. ಈಗ ದೊರೆತಿರುವ ಅತ್ಯಂತ ಹಳೆಯದಾದ ನಮೂನೆಗಳು ಚಿತ್ರಾತ್ಮಕ ಬರವಣಿಗೆಗಳನ್ನು ಹೊಂದಿದ್ದು ಕ್ರಿ.ಪೂ. ೪ನೇ ಸಹಸ್ರ ವರ್ಷಗಳಷ್ಟು ಹಳೆಯದಾಗಿದೆ. ಹಸಿ ಜೇಡಿಮಣ್ಣಿನಲ್ಲಿ ಜೊಂಡಿನ ಲೇಖನಿಯಿಂದ ಈ ಚಿಹ್ನೆಗಳನ್ನು ಬರೆದು ಅನಂತರ ಬಿಸಿಲಲ್ಲಿ ಒಣಗಿಸುತ್ತಿದ್ದರು. ಒಂದು ವೇಳೆ ಪತ್ರ ವಿಷಯ ಸಾಕಷ್ಟು ಮಹತ್ವದ್ದಾಗಿದ್ದರೆ ಜೇಡಿಮಣ್ಣನ್ನು ಒಲೆಯಲ್ಲಿ ಬೇಯಿಸುತ್ತಿದ್ದರು. ಹಿಂದೆ ಆದಂತೆಯೆ ಮತ್ತೊಂದು ಬಾರಿ ಈ ಬರಹ ಸಾಮಗ್ರಿಯ ಮೇಲ್ಮೈ ಮತ್ತು ರಚನೆ ಲಿಪಿಯ ಬೆಳವಣಿಗೆಯ ಮೇಲೆ ಪ್ರಭಾವ ಬೀರಿತು. ಹಸಿ ಜೇಡಿಮಣ್ಣಿನ ಮೇಲೆ ವೃತ್ತಗಳನ್ನು, ವಕ್ರರೇಖೆಗಳನ್ನು ಹಾಗೂ ಸೂಕ್ಷ್ಮವಾದ ರೇಖೆಗಳನ್ನು ಬರೆಯುವುದು ಕಷ್ಟ. ಇದರ ಪರಿಣಾಮವಾಗಿ ಈ ರೀತಿಯಲ್ಲಿ ಚಿತ್ರಾತ್ಮಕವಾಗಿರುವ ಸಂಕೇತಗಳು ಬೇರೆ ಬೇರೆ ಕೋನಗಳಲ್ಲಿ ಹೊಂದಿಸಿ ಬರೆಯಲಾದ, ಬೆಣೆಯಾಕಾರದ ಅಕ್ಷರಗಳ ರೂಪ ತಾಳಿದವು. ಕ್ಯೂನಿಫಾರ್ಮ್ ಎಂದು ಕರೆಯಲಾದ ಈ ಹೊಸ ಲಿಪಿ ಅಪಾರವಾದ ಸಾಹಿತ್ಯವೊಂದರ ಅಭಿವ್ಯಕ್ತಿಗೆ ಸಾಧನವಾಯಿತು. ಆಡಳಿತದಿಂದ ಹಿಡಿದು ಲಲಿತ ಸಾಹಿತ್ಯದವರೆಗೆ ಸುಮೇರಿಯನ್, ಬೆಬಿಲೋನಿಯನ್ ಮತ್ತು ಅಸ್ಸೀರಿಯನ್ ಚಕ್ರಾಧಿಪತ್ಯಗಳ ವ್ಯವಹಾರಗಳಿಗೆ ಈ ಲಿಪಿಯಿಂದ ಸಂದ ಸೇವೆ ಅಮೋಘವಾದುದು. ಕ್ರಿ.ಪೂ. ಏಳನೇ ಶತಮಾನದ ವೇಳೆಗೆ, ಅದು ಇನ್ನೂ ಸರಳವಾದ ಅರಮೆಕ್ (Aramic) ಲಿಪಿಗೆ ಅವಕಾಶ ಮಾಡಿಕೊಟ್ಟಿತು. ಕ್ಯೂನಿಫಾರ್ಮ್ ಲಿಪಿ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತ ಹೋದಂತೆಲ್ಲ ಪೆಪಿರಸ್ ಮತ್ತು ಚರ್ಮಗಳ ಬಳಕೆ - ಹೆಚ್ಚಾಗುತ್ತಾ ನಡೆಯಿತು.

ಜೇಡಿಮಣ್ಣಿನ ಫಲಕಗಳ ಪುಸ್ತಕಗಳು ಅನೇಕ ಗಾತ್ರಗಳನ್ನು ಮತ್ತು ಆಕಾರಗಳನ್ನು ಹೊಂದಿದ್ದವು. ಅವುಗಳ ಪೈಕಿ ತುಂಬ ಜನಪ್ರಿಯವಾದ ಮಾದರಿಗಳು ಬಹುಮುಖಿಯಾದ ಉರುಳೆಯಾಕಾರ ಹಾಗೂ ಉಬ್ಬಿರುವ ಪಕ್ಕಗಳನ್ನುಳ್ಳ ಆಯಾಕಾರದ (Oblong) ಇಟ್ಟಿಗೆಯ ರೀತಿಯಲ್ಲಿದ್ದವು. ನಾಗರಿಕ ಜನತೆಯ ಬದುಕಿಗೆ ಅವು ಮಹತ್ವ ಪೂರ್ಣವಾಗಿದ್ದುದರಿಂದ ಅರಮನೆಗಳು ಮತ್ತು ದೇವಾಲಯಗಳಿಗೆ ಸೇರಿದ ವಿಶೇಷ ಗ್ರಂಥಾಲಯಗಳಲ್ಲಿ ಅವುಗಳನ್ನು ಎಚ್ಚರಿಕೆಯಿಂದ ಕಾಪಾಡಲಾಗುತ್ತಿತ್ತು. ಅವುಗಳಿಗೆ ಪುಟ ಸಂಖ್ಯೆ ಸೂಚಿಗಳನ್ನೂ, ಓರೆ ಸೂಚಿಗಳನ್ನೂ ತಯಾರಿಸಿ ಶೆಲ್ಫ್‌ಗಳ ಮೇಲೆ ಅನುಕೂಲವಾದ ಕ್ರಮದಲ್ಲಿ ಹೊಂದಿಸಿಡುತ್ತಿದ್ದರು. ಕಾಗದ ಪತ್ರಗಳನ್ನು ಅನೇಕ ವೇಳೆ ಬೇಯಿಸಿದ

ಜೇಡಿಮಣ್ಣಿನ ಹೊದಿಕೆಯಲ್ಲಿಟ್ಟು ಅವುಗಳಲ್ಲಿ ಅಡಕವಾಗಿರುವ ರಹಸ್ಯ ವಿಚಾರಗಳನ್ನು ಕಾಪಾಡುತ್ತಿದ್ದರು. ಸಿಂಧೂಕಣಿವೆಯಲ್ಲಿ ಕ್ರಿ. ಪೂ. ೩ನೇ ಶತಮಾನದಲ್ಲಿ ಹೆಚ್ಚು ಕಡಮೆ ಇದೇ ರೀತಿಯ ಒಂದು ಸಂಸ್ಕೃತಿ ಪ್ರಚುರವಾಗಿತ್ತು. ಈ ಸಂಸ್ಕೃತಿಯಲ್ಲಿ ಮನೆಗಳನ್ನು ಕಟ್ಟಲು ಇಟ್ಟಿಗೆಗಳನ್ನು ಬಳಸುತ್ತಿದ್ದರು. ವಾಸ್ತವವಾಗಿ ನಮಗೆ ದೊರೆತಿರುವ ಏಕಮೇವ ಜೇಡಿಮಣ್ಣಿನ ಫಲಕವೆಂದರೆ ಇನ್ನೂ ದೂರದ ಪ್ರಾಚ್ಯ ದೇಶವಾದ ಮಲೇಶಿಯದಲ್ಲಿ. ಕ್ರಿ. ಶ. ೬ನೇ ಶತಮಾನದಲ್ಲಿ ಪಲ್ಲವರು ಬಳಸುತ್ತಿದ್ದ ಲಿಪಿಯ ಅಕ್ಷರಗಳನ್ನು ಇದರ ಮೂರು ಕಡೆಗಳಲ್ಲಿ ಕೆತ್ತಲಾಗಿದೆ.

ಹಂಚಿಪಕರೆಗಳು, ಮಡಕೆ ಚೂರುಗಳು

ತಂತ್ರಜ್ಞಾನ ಬೆಳೆಯುತ್ತಾ ಹೋದಂತೆಲ್ಲ ಸ್ವಲ್ಪ ಕಾಲದ ಮಟ್ಟಿಗೆ ಈ ಮೊದಲಿಗೆ ದೊರೆತಿದ್ದ ಬರವಣಿಗೆ ಸಾಮಗ್ರಿಗಳ ಪುನರಾವರ್ತನೆಯಾಗತೊಡಗಿತ್ತು. ಒಡೆದು ಹೋದ ವಸ್ತುಗಳು (ಉದಾ. ಒಡೆದ ಮಡಕೆ ಚೂರುಗಳು). ಕೆಲವು ಟಿಪ್ಪಣಿಗಳನ್ನು ಬರೆದು ಕೊಳ್ಳುವ ಅಥವಾ ಇತರ ಗೋಪ್ಯವಲ್ಲದ, ಸಮಾಚಾರಗಳನ್ನು ಕಳುಹಿಸುವ ಉಪ ಯೋಗಕ್ಕೆ ಬರತೊಡಗಿದವು. ಇಂಥ ಅಕ್ಷರಗಳನ್ನು ಕೆತ್ತಿದ ಸಾವಿರಾರು ಹಂಚಿಪಕರೆಗಳು ಮಡಕೆ ಚೂರುಗಳು ಮತ್ತು ಚಿಪ್ಪುಗಳು ಪಶ್ಚಿಮ ಏಷ್ಯಾದಲ್ಲಿ ನಡೆದ ಉತ್ಖನನಗಳಲ್ಲಿ ದೊರೆತಿವೆ. ಲಶೀಷ್ (Lachish) ಮೊದಲಾಡೆಗಳಲ್ಲಿ ದೊರೆತ ಇಂಥ ಹಂಚಿ ಪಕರೆಗಳು ಕ್ರಿ.ಪೂ. ೬ನೇ ಶತಮಾನಕ್ಕೆ ಸೇರಿದ್ದು, ಕರಿಯ ಬಣ್ಣದ ಮಸಿಯಲ್ಲಿ ಬರೆದ ಹಿಬ್ರೂ ಅಕ್ಷರಗಳನ್ನು ಹೊಂದಿವೆ. ಚರ್ಮ ಹಾಗೂ ಇನ್ನೂ ದುಬಾರಿಯಾದ ಪೆಪಿರಸ್‌ಗೆ ಹೋಲಿ ಸಿದರೆ ಹಂಚಿ ಪಕರೆಗಳು ಮಡಕೆ ಚೂರುಗಳು ಸುಲಭವಾಗಿ ಮತ್ತು ಅಗ್ಗವಾಗಿ ದೊರೆ ಯುತ್ತಿದ್ದವು. ಕಟ್ಟುಕಟ್ಟು ಮೊಹರು ಮಾಡಬೇಕಾದ ಸರಕಾರೀ ದಾಖಲೆಗಳಿಗೇನೂ ಇವು ಅಗತ್ಯವಾಗಿಲ್ಲದಿದ್ದಿರಬಹುದು.

ಪಾತ್ರೆಗಳು ಮತ್ತು ದಿನಬಳಕೆ ಪದಾರ್ಥಗಳು

ಹಂಚಿಪಕರೆ, ಮಡಿಕೆ ಚೂರುಗಳು ಚೆನ್ನಾಗಿ ರೂಢಿಯಾದ ಬರಹ ಸಾಮಗ್ರಿಗಳಾದ ವೇಳೆಯಲ್ಲಿ, ಸಾಧಾರಣ ಪಾತ್ರೆಗಳು ಮತ್ತು ದಿನ ಬಳಕೆ ಪದಾರ್ಥಗಳು ಸಹ ಇದೇ ರೀತಿಯ ಉದ್ದೇಶವನ್ನು ಪೂರೈಸತೊಡಗಿದವು. ಆದರೆ ಇವುಗಳ ಬಳಕೆ ವ್ಯಾಪಕವಾಗಿರದೆ ಅಪರೂಪವಾಗಿತ್ತಷ್ಟೆ. ಉದಾಹರಣೆಗೆ, ಮಸೀದೆಗಳಲ್ಲಿ ತೂಗುಹಾಕುವ ದೀಪಗಳ ಮೇಲೆಯೂ, ಕೆಲವು ವೇಳೆ ಪವಿತ್ರ ಕುರಾನಿನ ಸಾಲುಗಳನ್ನು ಬರೆಯುತ್ತಿದ್ದರು. ಹಾಗೆಯೆ ಮದುವಣಿಗರ ಆಸನಗಳು, ಸುಪ್ಪತ್ತಿಗೆಗಳು, ಮರದ ಅಥವಾ ಹಿತ್ತಾಳೆಯ ಮೇಜುಗಳು,

೮. ಪಾತ್ರೆಗಳ ಮೇಲಿನ ಬರಹ. ಕ್ರಿ.ಶ. ೬೦೦೮

ಸಂಗೀತ ವಾದ್ಯಗಳು, ಕನ್ನಡಿಗಳ ಹಿಂಭಾಗ ತಂತಿಬರಲುಗಳು, ಬೀಸಣಿಗೆಗಳು, ಆಯುಧಗಳು ಇವುಗಳ ಮೇಲೆ ಸಹ ಬರವಣಿಗೆಗಳು ಇರುತ್ತಿದ್ದವು. ಚರ್ಮದ ಪಾದರಕ್ಷೆಗಳ ಮೇಲೆ ಕೂಡ ಬರೆದದ್ದು ಕಂಡು ಬರುತ್ತದೆ. ಇದೇ ರೀತಿಯಲ್ಲಿ ಕಂಡು ಬರುವ ಮತ್ತೊಂದು ವೈಶಿಷ್ಟ್ಯವೆಂದರೆ ಸ್ಪೇನಿನಲ್ಲಿ ದೊರೆತ ಕಬ್ಬಿಣದ ಕೀಲಿ ಕೈಯ ಹಲ್ಲುಗಳು ಅರಬ್ಬಿ ಅಕ್ಷರಗಳ ಆಕೃತಿಯಲ್ಲಿದ್ದವು. ಬಹಳ ಪ್ರಾಚೀನವಾದ ಮತ್ತು ಅತ್ಯಂತ ಕುತೂಹಲಕರವಾದ ಅನೇಕ ಬರಹ ಸಾಮಗ್ರಿಗಳು ಚೀನಕ್ಕೆ ಸಂಬಂಧ ಪಟ್ಟಂತೆಯೂ ದೊರೆಯುತ್ತವೆ. ಉದಾಹರಣೆಗೆ, ಸುಮಾರು ಕ್ರಿ. ಪೂ. ೧೧೩೭- ೨೫೦ಕ್ಕೆ ಸೇರಿದ ಜೌ (zhou) ಕಾಲದ ಕಂಚಿನ ಪಾತ್ರೆಗಳ ಮೇಲೆ ಕೆಲವು ಪ್ರಶಸ್ತಿಗಳನ್ನು ಅಥವಾ ಅಂಕಿತಗಳನ್ನು ಕೆತ್ತಲಾಗಿದೆಯಂತೆ.

ಕಲ್ಲು ಮತ್ತು ಲೋಹ ಇವೆರಡು ಅನೇಕ ವೇಳೆ ಒಂದೇ ರೀತಿಯ ಉದ್ದೇಶಕ್ಕೆ ಪರಸ್ಪರ ಪೂರಕವಾಗಿ ಬಳಕೆಯಾಗಿರುವ ಸಂದರ್ಭಗಳು ಮೊದಲ ನೋಟಕ್ಕೆ ನಮಗೆ ಆಶ್ಚರ್ಯಕರವಾಗಿ ಕಾಣಬಹುದು. ಲೋಹವನ್ನು ಬರಹಕ್ಕಾಗಿ ಉಪಯೋಗಿಸಬೇಕಾದರೆ ಕಲ್ಲನ್ನು ಉಪಯೋಗಿಸುವುದಕ್ಕಿಂತಲೂ ಮಿಗಿಲಾದ ತಾಂತ್ರಿಕ ಜ್ಞಾನ ಅಗತ್ಯ. ಆದರೆ ಇವೆರಡು ಸುಲಭವಾಗಿ ನಶಿಸದೆ ಹೋಗುವಂತಹ ಮುಖ್ಯವಾದ ಗುಣವನ್ನು ಪಡೆದಿದ್ದರಿಂದ ಉಳಿದ ಬರವಣಿಗೆ ಸಾಮಗ್ರಿಗಳಿಗಿಂತ ಇವಕ್ಕೆ ದೊರೆತ ಮಹತ್ವ ಹೆಚ್ಚಾದದ್ದು. ಅದರಲ್ಲೂ ಮುಖ್ಯವಾದ ದಾಖಲೆಗಳನ್ನು ಮತ್ತು ಪವಿತ್ರವಾದ ಧಾರ್ಮಿಕ ಗ್ರಂಥಗಳನ್ನು ಕಾಪಾಡಲು ಇವು ಅತ್ಯುತ್ತಮ ಸಾಮಗ್ರಿಗಳೆನಿಸಿದವು.

ಲೋಹಗಳು

ರೋಮನ್ ಕಾನೂನುಗಳನ್ನು ಜ್ಯೂಪಿಟರನ ದೇವಸ್ಥಾನವಾದ ಕ್ಯಾಪಿಟಲ್ (Capitol) ಎಂಬಲ್ಲಿ ಕಂಚಿನಲ್ಲಿ ಕೆತ್ತಿಡಲಾಗಿದೆಯೆಂದು ಭಾವಿಸಲಾಗಿದೆಯಾದರೂ, ಲೋಹದ ಮೇಲಿನ ಬರವಣಿಗೆಗಳು ಹೆಚ್ಚು ಪ್ರಚಾರ ಪಡೆದುದು ಭಾರತ ಮತ್ತು ಆಗ್ನೇಯ ಏಷ್ಯಾದ ಕೆಲವು ಭಾಗಗಳಲ್ಲಿ. ಈಗ ದೊರೆತಿರುವ ಅತ್ಯಂತ ಹಳೆಯ ಲೋಹದ ಮೇಲಿನ ಬರವಣಿಗೆ ಅಂದರೆ ಸಿಂಧೂಕಣಿವೆಯಲ್ಲಿ ಸುಮಾರು ಕ್ರಿ.ಪೂ. ೨೮೦೦ರಲ್ಲಿ ದೊರೆತ ತಾಮ್ರದ ಶಾಸನ. ಆದರೆ ಆ ಬರವಣಿಗೆಯನ್ನು ಓದಲು ನಮಗೆ ಪೂರ್ಣವಾಗಿ ಸಾಧ್ಯವಾಗಿಲ್ಲ. ಹಿಂದಿನ ಕಾಲದ ಭಾರತದಲ್ಲಿ ರಾಜಕುಮಾರರು, ಮಾಂಡಳಿಕರು ಅಥವಾ ಐಶ್ವರ್ಯವಂತರು ಮತ್ತು ಪ್ರತಿಷ್ಠಿತರು ಜಮೀನನ್ನು ದಾನವಾಗಿ ಕೊಡುವ ಸಮಯದಲ್ಲಿ ದಾನದ ಒಕ್ಕಣೆಯನ್ನು ತಾಮ್ರ ಶಾಸನಗಳು ಪ್ರಮುಖ ಐತಿಹಾಸಿಕ ದಾಖಲೆಗಳಾಗಿ ಕೆಲಸ

ಮಾಡುತ್ತವೆ. ಇಂಥ ಫಲಕಗಳನ್ನು ತಯಾರಿಸಬೇಕಾದರೆ ತಾಮ್ರವನ್ನು ಅಗ್ಗಿಷ್ಟಿಕೆಯಲ್ಲಿ ಕಾಸಿ ಅಣಿಗೊಳಿಸಿ, ಒಕ್ಕಣೆಯ ಕರಡೊಂದನ್ನು ಮೊದಲೇ ಭೂರ್ಜಪತ್ರ ಅಥವಾ ತಾಳೆ ಗರಿಯ ಮೇಲೆ ತಯಾರಿಸಿ, ಅನಂತರ ಸುತ್ತಿಗೆ ಮತ್ತು ಉಳಿಗಳನ್ನು ಉಪಯೋಗಿಸಿ ಕೆತ್ತುತ್ತಿದ್ದರು. ಒಮ್ಮೊಮ್ಮೆ ಒಕ್ಕಣೆಯುಳ್ಳ ನೇರವಾಗಿ ಫಲಕದ ಮೇಲೆ ಬರೆಯುತ್ತಿದ್ದರು. ಕೆತ್ತುವವನು ಅದರ ಮೇಲೆಯೇ ಕೆತ್ತಿಕೊಂಡು ಹೋಗುತ್ತಿದ್ದನು. ಕೆಲವು ಫಲಕಗಳು ಆಯಾಕಾರದಲ್ಲಿ ಅಥವಾ ಚದರದ ಆಕಾರದಲ್ಲಿ ಇರುತ್ತಿದ್ದವು. ಕೆಲವೊಮ್ಮೆ ಒಂದೊಂದೇ ಫಲಕಗಳಿರುತ್ತಿದ್ದವು, ಹೆಚ್ಚಿದ್ದಲ್ಲಿ ಅಡಕವಾದ ವಿಷಯವನ್ನು ಕಾಪಾಡುವ ಸಲುವಾಗಿ ಒಂದರೊಳಗೊಂದನ್ನು ಸೇರಿಸಿಡುತ್ತಿದ್ದರು. ಆದರೆ ಬಹಳಷ್ಟು ಸಂದರ್ಭ ಗಳಲ್ಲಿ ಅವು ಅದಾಗಲೇ ಪ್ರಚಲಿತವಾಗಿದ್ದ ತಾಳೆಗರಿಯ ಆಕಾರದಲ್ಲಿದ್ದವು. ದಾನಿಯ ಮೊಹರುಳ್ಳ ಒಂದು ದಪ್ಪ ಉಂಗುರದಿಂದ ಅವನ್ನು ಒಟ್ಟಿಗೆ ಸೇರಿಸಿಡುತ್ತಿದ್ದರು. ಕೆಲವು ವೇಳೆ ಮುಂಚೆ ಬರೆದ ಬರವಣಿಗೆಯನ್ನು ಕಿತ್ತು ತೆಗೆದು ಹಾಕಿ ಹಳೆಯ ಫಲಕಗಳನ್ನು ಮತ್ತೆ ಉಪಯೋಗ ಮಾಡುತ್ತಿದ್ದರು. ಇದರಿಂದ ಆಗಾಗ್ಗೆ ನಿಜವಾದ ವಾರಸುದಾರರ ಹೆಸರುಗಳ ಬದಲಾಗಿ ಖೋಟಾ ವಾರಸುದಾರರ ಹೆಸರುಗಳು ಮೂಡಿ ಬರುತ್ತಿದ್ದವು. ಆದರೆ ಸಾಧಾರಣವಾಗಿ ದಾನ ಪಡೆದವರು ತಮ್ಮ ಇಂಥ ಹಕ್ಕಿನ ಫಲಕಗಳನ್ನು ಎಚ್ಚರಿಕೆ ಯಿಂದ ನೋಡಿಕೊಳ್ಳುತ್ತಿದ್ದರು. ಧಾರ್ಮಿಕ ಸಂಸ್ಥೆ ಅಥವಾ ದೇವಾಲಯಗಳಿಗೆ ನೀಡಲಾದ ದತ್ತಿಗಳಿಗೆ ಸಂಬಂಧಪಟ್ಟಂತೆ ಮುನ್ನೆಚ್ಚರಿಕೆಯ ಒಂದು ಕ್ರಮವಾಗಿ ದಾನದ ಒಕ್ಕಣೆಯನ್ನು ಗೋಡೆಯ ಮೇಲೆಯೂ ಪ್ರತಿಮಾಡಿಸಿ ಕೆತ್ತಿಸಿಡುತ್ತಿದ್ದರು. ತಮಿಳುನಾಡಿನ ತಂಜಾವೂರಿ ನಲ್ಲಿರುವ ಮಹಾದೇವಾಲಯ ಇದಕ್ಕೆ ಒಂದು ಉತ್ತಮವಾದ ನಿದರ್ಶನ. ಇಲ್ಲಿ ದೇವಾಲಯದ ಗೋಡೆಗಳ ಕೆಳಭಾಗದುದ್ದಕ್ಕೂ ವಿವಿಧ ಕಾಲಗಳಿಗೆ ಸೇರಿದ ಬಗೆಬಗೆಯ ಲಿಪಿಗಳಲ್ಲಿರುವ ಶಾಸನಗಳು ಕಂಡುಬರುತ್ತವೆ. ಅಂದಮಾತ್ರಕ್ಕೆ ಈಗ ನಮಗೆ ದೊರೆ ತಿರುವ ತಾಮ್ರಫಲಕಗಳೆಲ್ಲವೂ ಶಾಸನಗಳ ದಾಖಲೆಗಳಲ್ಲ. ಜೈನ, ಬೌದ್ಧ ಮತ್ತು ಹಿಂದೂ ಧರ್ಮಗ್ರಂಥಗಳನ್ನು ಸಹ ಈ ರೀತಿಯಲ್ಲಿ ಕೆತ್ತಿ ಶಾಶ್ವತವಾಗಿಸಿದ್ದಾರೆ. ಈ ಉದ್ದೇಶಕ್ಕಾಗಿ ಬಹಳ ಅಪರೂಪವಾಗಿ ಹಿತ್ತಾಳೆಯನ್ನು ಬಳಸುತ್ತಿದ್ದುದುಂಟು.

ಸೀಸವು ವಿಶೇಷ ಮೃದುವಾದ ಪದಾರ್ಥವಾಗಿದ್ದು ಪ್ರಪಂಚದ ಅತ್ಯಂತ ಜನಪ್ರಿಯ ವಾದ ಬರವಣಿಗೆ ಸಾಮಗ್ರಿಯೆನಿಸಿತ್ತು. ಅದನ್ನು ತೆಳುವಾದ ಹಾಳೆಗಳಾಗಿ ಕತ್ತರಿಸಿ, ಬರೆಯುವ ಕೆಲಸಮಾಡಿ ಅನಂತರ ಮಡಿಚಿ ಕಾಪಾಡುವುದು ಸುಲಭವಾಗಿತ್ತು. ಮಲೇಶಿ ಯದಲ್ಲಿ ಕೆಲವು ವೇಳೆ ತವರವನ್ನು ಬಳಸುತ್ತಿದ್ದರಾದರೂ ಬೆಳ್ಳಿಗೆ ಬದಲಾಗಿ ಮಾತ್ರ

ಅದನ್ನು ಉಪಯೋಗಿಸುತ್ತಿದ್ದ ಸಂದರ್ಭಗಳೇ ಹೆಚ್ಚು. ಕಬ್ಬಿಣವನ್ನು ಬರವಣಿಗೆಯ ಸಾಮಗ್ರಿಯಾಗಿ ಬಳಸುತ್ತಿದ್ದರಾದರೂ ತಾಂತ್ರಿಕ ತೊಂದರೆ ಜಾಸ್ತಿಯಾಗಿತ್ತು. ಕೆತ್ತಲು ಅನುಕೂಲವಾಗುವಂತೆ ಅದನ್ನು ಮೆದುವು ಮಾಡುವುದಾಗಲಿ, ಅದು ಹೆಚ್ಚು ಕಾಲ ಬಾಳಲು ತುಕ್ಕು ಹಿಡಿಯದಂತೆ ಮಾಡುವುದಾಗಲಿ, ಸುಲಭದ ಕೆಲಸವಾಗಿರಲಿಲ್ಲ. ೫ನೇ ಶತಮಾನದ ಶಾಸನವನ್ನು ಹೊಂದಿರುವ ದಿಲ್ಲಿಯ ಬಳಿಯ ಹೆಸರಾಂತ ಕಬ್ಬಿಣದ ಕಂಬ ಒಂದು ಅಪರೂಪವಾದ ನಿದರ್ಶನ. ಆ ಕಾಲದಲ್ಲಿ ಮತ್ತು ಈ ಪ್ರದೇಶದಲ್ಲಿ ಇಂಥ ನಿದರ್ಶನ ಏಕೈಕವಾಗಿ ದೊರೆತಿರುವುದರಿಂದ ಅದು ಅನೇಕ ಊಹಾಪೋಹಗಳಿಗೆ ಎಡೆ ಕೊಟ್ಟಿದೆ. ಬರಹಗಳಿಂದ ಕೂಡಿದ ಆಯುಧಗಳ ಬಗ್ಗೆ ಈಗಾಗಲೆ ಉಲ್ಲೇಖಿಸಲಾಗಿದೆ. ಭಾರತ ಮತ್ತು ಇಸ್ಲಾಂ ಶಾಸ್ತ್ರಗಳಲ್ಲಿ ಉಕ್ಕಿನ ಕತ್ತಿಗಳ ಮೇಲೆ ಅವುಗಳ ಒಡೆಯರ ಹೆಸರುಗಳನ್ನೊ, ಧರ್ಮಗ್ರಂಥಗಳ ಅಥವಾ ಕುರಾನಿನ ಸಾಲುಗಳನ್ನೊ ಕೆತ್ತಿಸುವುದು ರೂಢಿಯಲ್ಲಿತ್ತು.

ಅನೇಕ ಪ್ರಾಚೀನ ನಾಗರಿಕತೆಗಳಲ್ಲಿ ಚಿನ್ನ ಮತ್ತು ಬೆಳ್ಳಿಗಳಂಥ ಬೆಲೆಬಾಳುವ ಲೋಹಗಳ ಬಳಕೆಯನ್ನು ಪದೇ ಪದೇ ಮಾಡುತ್ತಿದ್ದರೂ ಇದು ತುಂಬ ದುಬಾರಿಯಾಗಿತ್ತು. ಸಾಮಾನ್ಯವಾಗಿ ಯಾವುದಾದರೂ ಧರ್ಮಗ್ರಂಥದ ಮಹತ್ವದ ಬಗ್ಗೆ ಹೆಚ್ಚು ಆದರ ಮೂಡಿಸಬೇಕಾದರೆ, ಜನತೆಯಿಂದ ವಿಶೇಷ ಗೌರವ ಮನ್ನಣೆಗಳನ್ನು ಪಡೆಯಬೇಕಾದರೆ ಇಂಥ ದುಬಾರಿಯ ‘ಪುಸ್ತಕ’ಗಳನ್ನು ಬರೆಸುತ್ತಿದ್ದರು. ಯಾವುದೇ ಪತ್ರ ಅಥವಾ ಸಂದೇಶ ಒಬ್ಬ ಪ್ರಭಾವೀ ವ್ಯಕ್ತಿಯನ್ನು ಕುರಿತು ಉದ್ದೇಶಿಸಿದ್ದಾದರೆ ಅವರ ಸ್ಥಾನಮಾನಗಳಿಗೆ ಅನುಗುಣವಾಗಿ ಚಿನ್ನ ಬೆಳ್ಳಿಯ ರಾಯಸಗಳನ್ನು ಕಳುಹಿಸುತ್ತಿದ್ದರು. ಇನ್ನೂ ಕೆಲವು ವೇಳೆ ತಮ್ಮ ಐಶ್ವರ್ಯ ಪ್ರತಿಷ್ಠೆಗಳನ್ನು ಜಗಜ್ಜಾಹೀರುಗೊಳಿಸುವ ಉದ್ದೇಶದಿಂದಲೇ ಇವುಗಳನ್ನು ಬಳಸುತ್ತಿದ್ದರು. ಉದಾಹರಣೆಗೆ ಕ್ರಿ.ಶ. ೫-೬ನೇ ಶತಮಾನಕ್ಕೆ ಸೇರಿದ ಎರಡು ಚಿನ್ನದ ಹಾಳೆಗಳು ಬರ್ಮಾದಲ್ಲಿ ಸಿಕ್ಕಿದ್ದು, ಅವುಗಳ ಮೇಲೆ ಒಂದು ಹೆಸರಾಂತ ಪಾಲಿ ಶ್ಲೋಕವಿದೆ. ಅವನ್ನು ಒಂದು ಇಟ್ಟಿಗೆಯೊಳಗಡೆ ಅಡಗಿಸಿಡಲಾಗಿತ್ತು. ಬೌದ್ಧ ಕಟ್ಟಡವೊಂದರ ಅಡಿಪಾಯಕ್ಕೆ ಅವು ಸೇರಿದವು ಎಂಬುದು ನಿರ್ವಿವಾದ. ಪರಂಪರಾಗತವಾದ ಅಭಿಪ್ರಾಯದಂತೆ, ಶ್ರೀಲಂಕೆಯಲ್ಲಿ ಸಮಸ್ತ ಬೌದ್ಧ ಧರ್ಮಸೂತ್ರಗಳನ್ನು ಕ್ರಿ.ಪೂ. ೮೮ರಲ್ಲಿ ಚಿನ್ನದ ತಟ್ಟೆಗಳಲ್ಲಿ ಬರೆಯಲಾಗಿತ್ತಂತೆ. ಅಲ್ಲದೆ ೧೯ನೇ ಶತಮಾನದವರೆಗೂ ಆಗ್ನೇಯ ಏಷ್ಯಾದ ರಾಜಕುಮಾರರು ಕೆಲವು ವೇಳೆ ತಮ್ಮ ಪ್ರಶಸ್ತಿಗಳನ್ನು ಚೊಕ್ಕವಾದ ತೆಳುಹಾಳೆಗಳ ಮೇಲೆಯೆ ಬರೆಯುತ್ತಿದ್ದರು.

ಚರ್ಮ, ಹದಮಾಡಿದ ಚರ್ಮ

ಕೆಲವು ಬರವಣಿಗೆಯ ಸಾಮಗ್ರಿಗಳು ಇತಿಹಾಸದಾದ್ಯಂತ ರೂಪ ಬದಲಾಯಿಸಿ, ಪುನಃ ಕಂಡು ಬರುತ್ತಿರುವುದು ತಾಂತ್ರಿಕ ಪ್ರಗತಿಯನ್ನು ಸೂಚಿಸುತ್ತವೆ. ಚರ್ಮವನ್ನು ಬರವಣಿಗೆಯ ಸಾಮಗ್ರಿಯಾಗಿ ಬಳಸುತ್ತಿದ್ದ ಕಾಲ ಬಹಳ ಹಿಂದಿನದಾದರೂ ನಿರ್ದಿಷ್ಟವಾಗಿ ಅದು ಎಂದಿನಿಂದ ಎಂದು ಹೇಳಲು ಬರುತ್ತಿಲ್ಲ. ಸಂಸ್ಕರಿಸದೆ (ಹೊಗೆ ಹಾಕಿ) ಹಾಗೂ ಎಣ್ಣೆ ಬಳಸಿ ಪ್ರಕ್ರಿಯೆಗೊಳಪಡಿಸಿದ ಮೇಲೆ ಅದು ಬಳುಕುವಂತಾಗಿ ಬಹಳ ಕಾಲ ಬಾಳುತ್ತದೆ, ನೋಡಲು ಆಕರ್ಷಕವಾಗಿರುತ್ತದೆ. ಹದಮಾಡುವ ಪ್ರಕ್ರಿಯೆಗೆ ಒಳಪಡಿಸಿದ ಮೇಲೆ ಚರ್ಮ ಒಣದಾಗಿ ಉಳಿಯುತ್ತದೆ. ಸುಣ್ಣ, ಉತ್ತತ್ತಿ ಮುಂತಾದ ಅಭಿಕಾರಕವನ್ನು ಬಳಸಿ (ಅದಕ್ಕಾಗಿ ಈಜಿಪ್ಟಿನಲ್ಲಿ ಒಂದು ಜಾತಿಯ ಜಾಲಿಮರವನ್ನು ಹದಗೊಳಿಸಲಾಗುತ್ತಿತ್ತು.) ಚರ್ಮದ ಮೇಲೆ ಒಂದೇ ಕಡೆ ಬರೆಯಬೇಕೆಂಬುದು ರೂಢಿಯಾಗಿತ್ತು-ಹಾಗಾಗಿಯೆ ನಮಗೆ ಹೆಚ್ಚಾಗಿ ಚರ್ಮದ ಹಸ್ತಪ್ರತಿಗಳಲ್ಲಿ ಸುರುಳಿ ಸುತ್ತಿರುವಂತಹ ಗುಣಲಕ್ಷಣ ಕಂಡುಬರುವುದು. ಈಗ ದೊರೆತಿರುವ ಅತ್ಯಂತ ಹಳೆಯ ಚರ್ಮದ ಬರವಣಿಗೆಯ ನಮೂನೆ ಪ್ರಾಚೀನ ಈಜಿಪ್ಟಿನದು. (ಸು.ಕ್ರಿ. ಪೂ. ೨೫೦೦). ಪಶ್ಚಿಮ ಏಶಿಯ, ಪರ್ಶಿಯ, ಇರಾಕ್ ಮತ್ತು ಅನಂತರ ತುರ್ಕಿಸ್ತಾನಗಳಲ್ಲಿಯೂ ಚರ್ಮ ಸಾಕಷ್ಟು ಜನಪ್ರಿಯವಾದ ಬರಹ ಸಾಮಗ್ರಿಯಾಗಿತ್ತು. ಇದರಲ್ಲೂ ಕೆಲವು ಕೊರತೆಗಳು ಕಂಡು ಬರುತ್ತವೆ. ಸರಿಯಾಗಿ ಹದಮಾಡದೆ ಇರುವ ಚರ್ಮ ತುಂಬ ದುರ್ವಾಸನೆಯನ್ನು ಬೀರುತ್ತದೆ. ಖುಸ್ರು ಪರ್ವೀಜ್ ಎಂಬ ದೊರೆ ಈ ದುರ್ವಾಸನೆಯಿಂದ ಅಸಹ್ಯಪಟ್ಟು ಇನ್ನು ಮುಂದೆ ತನ್ನ ಬಳಿಗೆ ತರುವ ವಾರ್ಷಿಕ ತೆರಿಗೆ ಪಟ್ಟಿಗಳಿಗೆ (ಚರ್ಮದ್ದು) ಕೇಸರಿ ಬಣ್ಣ ಹಚ್ಚಿ, ಪನ್ನೀರು ಸಿಂಪಡಿಸಿ ಕಳುಹಿಸಿಕೊಡಬೇಕೆಂದು ಆಜ್ಞೆಮಾಡಿದನಂತೆ !

ನಮಗೆ ಈಗ ದೊರೆತಿರುವ ಪ್ರಮುಖ ಚರ್ಮದ ಬರವಣಿಗೆ ದಾಖಲೆಗಳೆಂದರೆ, ಸುಮಾರು ಮೂವತ್ತು ವರ್ಷಗಳ ಹಿಂದೆ ಜೂಡಿಯನ್ ಮರುಭೂಮಿಯಲ್ಲಿ ಅಕಸ್ಮಾತ್ತಾಗಿ ದೊರೆತ, 'ಬತ್ತಿದ ಸಮುದ್ರದ ಸುರುಳಿಗಳು' (Dead Sea Scrolls). ಅಲ್ಲದೆ ಈಜಿಪ್ಟ್ ಮತ್ತು ಪ್ಯಾಲೆಸ್ಟೈನಿನ ಒಣ ಹವಾಮಾನದಲ್ಲಿ ಅನೇಕ ಪ್ರಾರಂಭಿಕ ಕ್ರೈಸ್ತ ದಾಖಲೆಗಳನ್ನು ಕಾಪಾಡಿ ಇಟ್ಟಿದ್ದಾರೆಂಬುದೂ ಗಮನಾರ್ಹ. ಸಾಮಾನ್ಯವಾಗಿ ಕುರಿ, ದನಕರುಗಳು ಮತ್ತು ಆಡುಗಳ ಚರ್ಮವನ್ನು ಬರವಣಿಗೆಗಾಗಿ ಬಳಸುತ್ತಿದ್ದರಾದರೂ ಅಪರೂಪವಾಗಿ ಜಿಂಕೆ, ಚಿಗರಿ, ಸಾರಂಗ ಮತ್ತು ಆಸ್ಟ್ರಿಚ್‌ಗಳ ಚರ್ಮವನ್ನು ಸಹ ಉಪಯೋಗಿಸುತ್ತಿದ್ದುದುಂಟು.

೧೦. ಚರ್ಮ

ಬೈಬಲ್ಲಿನ ಹಳೆಯ ಒಡಂಬಡಿಕೆಯ ಮೊದಲನೇ ಪಂಚಕದ ಐದನೇ ಪುಸ್ತಕದ ಪ್ರಾರಂಭವನ್ನು ತೋರುವ ಈಜಿಪ್ಟಿನ ದೇಶೀಯ ಕ್ರೈಸ್ತರ ಒಂದು ಪಂಗಡವಾದ ಕಾಪ್ಟಿಕ್ ಜನರಿಗೆ ಸೇರಿದ ಬೈಬಲ್ಲಿನ ಒಂದು ಹಾಳೆ.

ಚರ್ಮಕಾಗದ, ಮೃದುಚರ್ಮ ಕಾಗದ

ಬರವಣಿಗೆಯ ಸಾಮಗ್ರಿಯಾಗಿ ಚರ್ಮವನ್ನು ಬಳಸುವಲ್ಲಿ ಏನೇ ಅನುಕೂಲಗಳಿದ್ದರೂ ಅದು ಪೆಪಿರಸ್‌ಗಿಂತ ಉತ್ತಮವೆನಿಸದೆ ಹೋಯಿತು. ಇವೆರಡು ಸಾಮಗ್ರಿಗಳೂ ಹೆಚ್ಚು ಕಡಮೆ ಭೌಗೋಳಿಕವಾಗಿ ಒಂದೇ ಪ್ರದೇಶದಲ್ಲಿ ಬಳಕೆಯಲ್ಲಿದ್ದವು. ಚರ್ಮವನ್ನು ಉತ್ತಮ ಪಡಿಸಲು ನಡೆಸಿದ ಪ್ರಯತ್ನಗಳನ್ನೇ ಚರ್ಮ ಕಾಗದ ಅಥವಾ ಪಾರ್ಚ್‌ಮೆಂಟಿನ (Parchment) ಅನ್ವೇಷಣೆಗೆ ಹಾದಿಮಾಡಿಕೊಟ್ಟವು. ಅದರ ಶ್ರೇಯಸ್ಸು ಏಶಿಯಾಮೈನರ್‌ನಲ್ಲಿದ್ದ ಯುಮೆನಸ್ II (Eumenes II) (ಕ್ರಿ.ಪೂ. ೧೯೭-೧೫೯) ದೊರೆಗೆ ಸಲ್ಲುತ್ತದೆ. ಈಜಿಪ್ಟಿನ ದೊರೆ ಟಾಲೆಮಿ (Ptolemy) ತನ್ನ ಪುಸ್ತಕ ಸಂಗ್ರಹ ಪ್ರಿಯತೆಗೆ ಪ್ರತಿಸ್ಪರ್ಧಿಯಾಗಿ ನಿಂತ ಯುಮೆನಸ್‌ನ ಕೀರ್ತಿಯನ್ನು ಸಹಿಸದೆ, ಅವನಿಗೆ ಸೇರಿದ ಪೆಪಿರಸ್‌ನ ಒಂದು ಸರಕು ಹಡಗನ್ನು ಹಿಡಿದಾಗ, ಯುಮೆನಸ್ ಚರ್ಮಕಾಗದವನ್ನು ಕಂಡು ಹಿಡಿದ; ಎಂದು ಹಿರಿಯ ಪ್ಲಿನಿ (Pliny the Elder) ಅಭಿಪ್ರಾಯಪಟ್ಟಿದ್ದಾನೆ.

ಚರ್ಮಕಾಗದವನ್ನು ತಯಾರಿಸುವ ವಿಧಾನ ಸಾಕಷ್ಟು ಕ್ಲಿಷ್ಟವಾಗಿದೆ. ಚರ್ಮವನ್ನು ಇಡಿಯಾಗಿ ತೆಗೆದುಕೊಂಡು ಸುಣ್ಣದಲ್ಲಿ ನೆನೆಸಿ, ಕೂದಲನ್ನು ಮತ್ತು ಮಾಂಸದ ತುಣುಕುಗಳನ್ನು ತೆಗೆದುಹಾಕಿ. ಹಿಗ್ಗಿಸಿ, ಎರಡೂ ಬದಿಯಲ್ಲಿ ಕೆರೆದು ತೆಗೆದು ಹಾಕಿ. ಬಿಸಿನೀರಿನಲ್ಲಿ ಕುದಿಸಬೇಕಿತ್ತು. ಮತ್ತೆ ಅದನ್ನು ಕೆರೆದು ತೆಗೆದು ಪ್ಯೂಮೈಸ್ (Pumice) ಎಂಬ ಕಲ್ಲಿನಿಂದ ಉಜ್ಜಿ ಮತ್ತೆ ಒಣಗಿಸಬೇಕಿತ್ತು. ಹಿಗ್ಗಿಸುವುದು ತುಂಬ ಆವಶ್ಯಕವಾಗಿತ್ತು. ಏಕೆಂದರೆ ಚರ್ಮಕಾಗದ ತೆಳುವಾದಷ್ಟೂ ಉತ್ತಮ ಗುಣಮಟ್ಟದ್ದಾಗಿರುತ್ತಿತ್ತು. ಹಾಳೆಯ ಹಿಂಭಾಗ ಮತ್ತು ಮುಂಭಾಗ ಎರಡನ್ನೂ ಸುಲಭವಾಗಿ ಗುರುತಿಸಬಹುದಾಗಿತ್ತು. ಒಳಗಡೆಯ ಭಾಗ ತುಂಬ ಗಟ್ಟಿಯಾಗಿದ್ದು ಇನ್ನೂ ಹಳದಿಯಾಗಿದ್ದು ಮಸಿಯನ್ನು ಚೆನ್ನಾಗಿ ಹೀರಿಕೊಳ್ಳುತ್ತಿತ್ತು. ಹೊರಭಾಗ ನುಣುಪಾಗಿದ್ದು ಬರೆಯಲು ಸುಲಭವಾಗಿದ್ದರೂ ಕೆಲವು ರೀತಿಯ ಮಸಿ ಇದರ ಮೇಲೆ ಹಲ್ಲೆಹಲ್ಲೆಗಳಾಗಿ ಹೊರಬರುತ್ತಿತ್ತು. ಕ್ರಿ.ಪೂ. ೨ನೇ ಶತಮಾನದಷ್ಟು ಹಳೆಯ ಚರ್ಮ ಕಾಗದದ ತುಣುಕುಗಳು ದೊರೆಯಬಹುದಾದರೂ ಅದು ರೋಮನ್ ಪ್ರಪಂಚದಲ್ಲಿ ಪೆಪಿರಸ್‌ಗೆ ಪ್ರತಿಸ್ಪರ್ಧಿಯಾಗಿ ನಿಂತುದು ಕ್ರಿ.ಪೂ ೨ನೇ ಶತಮಾನದ ಅನಂತರವೇ. ಉತ್ತಮವಾದ ಪುಸ್ತಕಗಳ ಬರವಣಿಗೆಗಾಗಿ ಅದನ್ನು ಬಳಸಲು ಮತ್ತೆರಡು ಶತಮಾನಗಳೇ ಬೇಕಾದುವು. ಕೇವಲ ಒಂದೇ ಕಡೆಯಲ್ಲಿ ಬರೆಯಬೇಕಾದ ಅಗತ್ಯ ಇರದಿದ್ದುದರಿಂದ ಹಳೆಯ ಸುರುಳಿ ಮಾದರಿಗೆ ಬದಲಾಗಿ ಗ್ರಂಥಾಕಾರದ

ಬಳಕೆಗೆ ಬರಲಾರಂಭಿಸಿತು. ಬರೆಯಲು ಬಣ್ಣಗಳನ್ನು ಅಪರೂಪವಾಗಿ ಉಪಯೋಗಿಸುತ್ತಿದ್ದು ಅದು ಪ್ರಭಾವಕಾರಿಯಾಗಿತ್ತು. ಯುರೋಪಿನಲ್ಲಿ ಮಧ್ಯಯುಗದ ಉತ್ತರಾರ್ಧದವರೆಗೂ ಬರಹ ಸಾಮಗ್ರಿಯಾಗಿ ಬಳಕೆಯಾದ ಚರ್ಮಕಾಗದ ಕ್ರಮೇಣ ಕಾಗದಕ್ಕೆ ಅವಕಾಶ ಮಾಡಿಕೊಟ್ಟಿತು. ಈ ಕ್ಷೇತ್ರದಲ್ಲಿ ಉತ್ಪಾದಿಸುವ ಅತ್ಯಂತ ಉತ್ತಮ ಗುಣಮಟ್ಟದ ಚರ್ಮಕಾಗದವೆಂದರೆ ಗರ್ಭಪಾತಹೊಂದಿದ ಕರುಗಳ ಗರ್ಭಾಶಯದಿಂದ ತಯಾರಿಸುವ ಮೃದು ಚರ್ಮಕಾಗದ.

ರೇಷ್ಮೆ, ಹತ್ತಿ, ಲಿನೆನ್

ಇವು ಮೊದಲಿಗೆ ಉಡುಪುಗಳನ್ನು ತಯಾರಿಸಲು ಉದ್ದೇಶಿಸಿದ್ದು ಬರವಣಿಗೆಗೂ ಉಪಯೋಗವಾಗತೊಡಗಿದವು. ಅವೇ ರೇಷ್ಮೆ, ಹತ್ತಿ ಮತ್ತು ಲಿನೆನ್. ಈ ಕ್ಷೇತ್ರದಲ್ಲಿ "ರೇಷ್ಮೆ ಬಹಳ ಕಾಲದಿಂದಲೂ ಬಳಕೆಯಲ್ಲಿತ್ತು" ಎಂದಷ್ಟೇ ಚೀನೀ ದಾಖಲೆಗಳು ಹೇಳುತ್ತವೆ. ಅದರ ವ್ಯಾಪಾರೀ ಮಹತ್ವವನ್ನು ಗಮನಿಸಿದರೆ ಅದು ಕ್ರಿ.ಪೂ. ೨೬೪೦ರಲ್ಲಿ ರಾಜ್ಯವಾಳಿದ ಹುವಾಂಗ್ ಡೀ (Huang Di) ಇವನದ್ದಾಗಿದೆ. ಆತನ ರಾಣಿ ಶ್ರೀಲಿಂಗ್ (xi Ling) ಎಂಬಾಕೆ ರೇಷ್ಮೆ ವ್ಯವಸಾಯದಲ್ಲಿ ತುಂಬ ಆಸಕ್ತಿ ತೋರುತ್ತಿದ್ದಳು. ಅನೇಕ ಶತಮಾನಗಳ ವರೆಗೆ ಚೀನವು ರಫ್ತು ಮಾಡುತ್ತಿದ್ದ ಪದಾರ್ಥಗಳಲ್ಲೆಲ್ಲ ಅತ್ಯಂತ ಬೆಲೆಯುಳ್ಳದ್ದು ರೇಷ್ಮೆಯೆ ಆಗಿತ್ತು. ಇದರ ಉತ್ಪಾದನೆಯನ್ನು ಅತ್ಯಂತ ರಹಸ್ಯವಾಗಿ ಇಡಲಾಗುತ್ತಿತ್ತು. ಮತ್ತು ಆ ರಹಸ್ಯವನ್ನು ಬೇರೆಯವರಿಗೆ ಬಿಟ್ಟುಕೊಟ್ಟವರಿಗೆ ಯಮಯಾತನೆಯ ಶಿಕ್ಷೆ ವಿಧಿಸಲಾಗುತ್ತಿತ್ತು. ಆದರೂ ಚೀನೀಯರು ಕ್ರಮೇಣ ಅದರ ಏಕಸ್ವಾಮ್ಯವನ್ನು ಬಿಟ್ಟುಕೊಡುವಂತಾದುದಕ್ಕೆ ಹಲವಾರು ಕತೆಗಳಿವೆ. ಉದಾ. ಕ್ರಿ.ಶ. ೧೪೦ರಲ್ಲಿ ಓರ್ವ ಚೀನೀ ರಾಜಕುಮಾರಿಯನ್ನು ಖೊತಾನಿಗೆ ಮದುವೆ ಮಾಡಿಕೊಟ್ಟಾಗ, ಆಕೆ ತನ್ನ ಶಿರೋವೇಷದಲ್ಲಿ ಕೆಲವು ರೇಶ್ಮೆಯ ಹುಳಗಳನ್ನು ಅಡಗಿಸಿಟ್ಟುಕೊಂಡಿದ್ದಳಂತೆ. ಕ್ರಿ.ಶ. ೩೦೦ರಲ್ಲಿ ಕೊರಿಯನ್ನರು, ರೇಶ್ಮೆ ವ್ಯವಸಾಯವನ್ನು ಬಲ್ಲಂಥ ನಾಲ್ವರು ಚೀನೀ ಯುವತಿಯರನ್ನು ಜಪಾನಿಗೆ ಸಾಗಿಸಿದರಂತೆ. ಕ್ರಿ.ಶ. ೫೫೫ರಲ್ಲಿ ಬೈಜಾಂಟಿನ್‌ನ ಸಾಮ್ರಾಟನಾದ ಜಸ್ಟಿನಿಯನ್ ಚೀನಾ ವಾಸಸ್ಥರಾಗಿದ್ದ ಇಬ್ಬರು ಪರ್ಶಿಯನ್ ಸನ್ಯಾಸಿಗಳಿಗೆ ಗಂಟುಬಿದ್ದು, ಅವರ 'ಪೊಳ್ಳು' ಬಿದಿರಿನ ಕೋಲುಗಳಲ್ಲಿ ರೇಶ್ಮೆ ಹುಳಗಳನ್ನು ತುಂಬಿಸಿ ತರಿಸಿಕೊಂಡನಂತೆ.

ರೇಷ್ಮೆ ಆಗಾಗ್ಗೆ ಬರವಣಿಗೆ ಸಾಮಗ್ರಿಯಾಗಿಯೂ ಬಳಕೆಯಾಗುತ್ತಿತ್ತೆಂದು ಕ್ರಿ.ಪೂ. ೪ನೇ ಮತ್ತು ೫ನೇ ಶತಮಾನದ ಅನೇಕರು ಉಲ್ಲೇಖಿಸಿದ್ದಾರೆ. ಕ್ರಿಸ್ತ ಶಕಾರಂಭದ

ಹೊತ್ತಿಗೆ ರೇಷ್ಮೆ, ಬರವಣಿಗೆ ಕೆಲಸಕ್ಕಾಗಿ ವ್ಯಾಪಕವಾಗಿ ಬಳಕೆಯಾಗುತ್ತಿತ್ತು. ಕಾಗದ ಪತ್ರಗಳನ್ನು, ಸಾಹಿತ್ಯ ಕೃತಿಗಳನ್ನು ಹಾಗೂ ಸರಕಾರಿ ದಾಖಲೆಗಳನ್ನು ಬರೆಯಲು ರೇಷ್ಮೆ ತುಂಬ ಉಪಯೋಗಕ್ಕೆ ಬರುತ್ತಿತ್ತು. ಆದರೆ ರೇಷ್ಮೆ ಚೀನದಲ್ಲಿ ತುಂಬ ದುಬಾರಿಯಾದ ವಸ್ತುವಾಗಿತ್ತಾದ್ದರಿಂದ ಹೊಸ ವಿಧಾನವೊಂದು ಅಸ್ತಿತ್ವಕ್ಕೆ ಬಂತು. ಇದರ ಪ್ರಕಾರ ಹಳೆಯ ರೇಷ್ಮೆ ಚಿಂದಿಗಳನ್ನು ರುಬ್ಬಿ ಹೊರಟಂಥ ಮಿಶ್ರಣವನ್ನು ಒಂದು ಚೌಕಟ್ಟಿನ ಮೇಲೆ ತೆಳ್ಳಗೆ ಹರಡಿ ಒಂದು ರೀತಿಯ 'ರೇಷ್ಮೆ ಕಾಗದ'ವನ್ನು ತಯಾರಿಸತೊಡಗಿದರು. ರೇಷ್ಮೆಯನ್ನು ಚೀನೀಯರೇ ಮೊದಲಿಗೆ ಕಂಡು ಹಿಡಿದರು ಎನ್ನಬಹುದಾದರೆ ಬರೆಯು ವುದಕ್ಕಾಗಿ ಹತ್ತಿಯ ಬಳಕೆಯನ್ನು ಮೊತ್ತಮೊದಲು ಭಾರತೀಯರೇ ಮಾಡಿದರು ಎಂದು ಖಂಡಿತವಾಗಿ ಹೇಳಬಹುದು. ಮೊಹೆಂಜದಾರೊ (ಸು. ಕ್ರಿ.ಪೂ. ೨೮೦೦) ಪಳೆಯುಳಿಕೆ ಗಳಲ್ಲಿ ಸಹ ಹತ್ತಿಯ ಎಳೆಗಳು ದೊರಕಿವೆಯಲ್ಲದೆ ಅಭಿಜಾತ ಭಾರತೀಯ ಸಾಹಿತ್ಯ ದಲ್ಲೂ ಹತ್ತಿಯ ಬಳಕೆಯನ್ನು ಕುರಿತಂತೆ ಅನೇಕ ಉಲ್ಲೇಖಗಳು ಕಾಣಸಿಗುತ್ತವೆ. ಬಹಳಷ್ಟು ವೇಳೆ ಗೋದಿ ಅಥವಾ ಅಕ್ಕಿಯ ಹಿಟ್ಟಿನಿಂದ ಮಾಡಿದ ಗಂಜಿಯಿಂದ ಹತ್ತಿ ಯನ್ನು ಸಂಸ್ಕರಿಸಿ, ಒಣಗಿಸಿ, ಆಮೇಲೆ ಅದನ್ನು ಕವಡೆ ಅಥವಾ ಕಲ್ಲಿನಿಂದ ನಯವಾಗಿ ತಿಕ್ಕುತ್ತಿದ್ದರು. ಇದರಿಂದಾಗಿ ಗಟ್ಟಿಯಾದ, ಆದರೂ ಬಳುಕುವಂತಹ ಸಾಮಗ್ರಿ ದೊರೆ ಯುತ್ತಿತ್ತು. ದಾಖಲೆಗಳ ಕರಡುಗಳನ್ನು ಇಲ್ಲವೆ ಇದೇ ಹಸ್ತಪ್ರತಿಗಳನ್ನು ಬರೆಯಲು ಈ ಕಾಗದ ತುಂಬ ಉಪಯೋಗಕ್ಕೆ ಬರುತ್ತಿತ್ತು. ಇಂದಿಗೂ ರಾಜಸ್ಥಾನದಲ್ಲಿ ಭವಿಷ್ಯ ನುಡಿಯುವ ಅಲೆಮಾರಿಗಳು ತಮ್ಮೊಡನೆ ನಕ್ಷೆಗಳನ್ನು, ಜಾತಕಗಳನ್ನೂ ಹಾಗೂ ಬಣ್ಣ ಬಣ್ಣದ ಅಕ್ಷರಗಳಲ್ಲಿ ಬರೆದಿರುವ ಹತ್ತಿಯ ಸುರುಳಿಗಳನ್ನು ಹಿಡಿದುಕೊಂಡು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುತ್ತಿರುತ್ತಾರೆ. ಹಳ್ಳಿಗರಿಗೆ ಅದನ್ನು ವಿವರಿಸಿ ಭವಿಷ್ಯ ಹೇಳುತ್ತಾರೆ. ಇನ್ನು ಕೆಲವು ವೇಳೆ ಹತ್ತಿಯನ್ನು ಎಷ್ಟು ದೇಶೀಯ ವಿಧಾನಗಳಿಂದ ಸಂಸ್ಕರಿಸುತ್ತಿದ್ದರೆಂದರೆ ಅದು ಬೇರೆಯದೆ ಆದ ಪದಾರ್ಥವೇನೋ ಎನಿಸುತ್ತಿತ್ತು. ದಕ್ಷಿಣ ಭಾರತದಲ್ಲಿ, ಅದರಲ್ಲೂ ವಿಶೇಷವಾಗಿ ಮೈಸೂರು ಪ್ರದೇಶದಲ್ಲಿ ವ್ಯಾಪಾರಿಗಳು ಸಾಕಷ್ಟು ಈಚಿನವರೆಗೂ 'ಕಡಿತ' ಅಥವಾ ಕಡತಗಳೆಂದು ಕರೆಯುತ್ತಿದ್ದ ಲೆಕ್ಕದ ಪುಸ್ತಕಗಳನ್ನು ಬಳಸುತ್ತಿದ್ದರು. ಹತ್ತಿಯ ಉದ್ದುದ್ದನ ಹಾಳೆಗಳನ್ನು ಒಣಗಿಸಿ, ಹುಣಸೇ ಬೀಜದ ಗಂಜಿಯಲ್ಲಿ ಒತ್ತಿ, ಇದ್ದಲಿನಿಂದ ಕಪ್ಪಾಗಿ ಮಾಡಿ ರಾಗಮಾಲಿಕೆಯ ರೀತಿಯಲ್ಲಿ ಮಡಿಚಿ ಅದರ ಮೇಲೆ ಬಳಪದಿಂದ ಬರೆಯುತ್ತಿದ್ದರು. ಪುಸ್ತಕಗಳನ್ನು ಮಡಿಚುವುದು ಭಾರತದಲ್ಲಿ ಹೆಚ್ಚು ಕಡಿಮೆ ಚಾಲ್ತಿಯಲ್ಲಿ ಇಲ್ಲದಿದ್ದುದರಿಂದ, ಮೈಸೂರಿನ ವ್ಯಾಪಾರಿಗಳು ಮೂಲ

ಭೂತವಾಗಿ ಪ್ರಾಚ್ಯದೇಶಗಳೊಡನೆ ಸಂಪರ್ಕವಿಟ್ಟುಕೊಂಡಿದ್ದು ಯಾವುದೇ ವಿದೇಶಿ ಮಾದರಿಯನ್ನು ಅನುಸರಿಸಿರಬೇಕೇನೊ.

ಮೂರನೆಯ ಬರಹ ಸಾಮಗ್ರಿಯಾದ ಲಿನೆನ್ (ನಾರಗಸೆ) ಈಜಿಪ್ಟಿನಲ್ಲಿ ಚಕ್ರವರ್ತಿಗಳ ಆಡಳಿತವಿದ್ದ ಕಾಲದಲ್ಲೇ ಬರಹ ಉಪಯೋಗಕ್ಕೆ ಬಂದಿತ್ತು. ಈಜಿಪ್ಟಿನ ಪಿರಮಿಡ್ಡುಗಳಲ್ಲಿ ಇಡುತ್ತಿದ್ದ ಶವಗಳಿಗೆ ಹೊಚ್ಚುವ ಬಟ್ಟೆಯ ಮೇಲೆ 'ಮೃತರ ಗ್ರಂಥ' (Book of Dead) ಎಂಬುದರಿಂದ ಆಯ್ದ ಭಾಗಗಳನ್ನು ಬರೆದಿರುವುದು ಕಂಡು ಬರುತ್ತದೆ. ಬರಹಕ್ಕಾಗಿ ಕಪ್ಪನೆಯ ಅಥವಾ ಚಿನ್ನದ ಮಸಿಯನ್ನು ಬಳಸುತ್ತಿದ್ದರಾದರೂ ಕೆಲವು ಸಂದರ್ಭಗಳಲ್ಲಿ ಬರವಣಿಗೆಯನ್ನು ಬಟ್ಟೆಗೇ ನೇರವಾಗಿ ಕಸೂತಿ ಮಾಡಿ ಹೊಲಿಯುತ್ತಿದ್ದರು. ಇಸ್ಲಾಂ ಕಾಲದಲ್ಲಿ ಬಟ್ಟೆಬರೆಗಳು ಬರಹ ಸಾಮಗ್ರಿಗಳ ಪಾತ್ರವನ್ನು ನಿರ್ವಹಿಸುತ್ತಿದ್ದವು. ತಲೆಗೆ ಸುತ್ತುವ ಪೇಟಗಳ ಮೇಲೆ ಇಡೀ ಕುರಾನಿನ ಪಾಠಗಳನ್ನು ಕಾಣಬಹುದಿತ್ತು. ಲಿನೆನ್ ಅಂಗಿಗಳ ಮೇಲೆ ಮದುವೆ ಒಪ್ಪಂದಗಳನ್ನೂ ಹೆಣೆಯುತ್ತಿದ್ದರು!

ಪೆಪಿರಸ್, ಕಾಗದ, ನೆಲ್ಲು ಕಾಗದ

ನಮಗೆ ಪರಿಚಿತವಾದ ಇನ್ನೂ ಎರಡು ಬರವಣಿಗೆಯ ಸಾಮಗ್ರಿಗಳಿವೆ. ಪೆಪಿರಸ್ ಮತ್ತು ಕಾಗದ. ಇವೆರಡನ್ನು ತಯಾರಿಸುವ ವಿಧಾನಗಳೂ ಕ್ಲಿಷ್ಟವಾದುವು. ಸುಮಾರು ನಾಲ್ಕು ಸಾವಿರ ವರ್ಷಗಳಷ್ಟು ಕಾಲ ಪೆಪಿರಸ್ ಮೊದಲಿಗೆ ಈಜಿಪ್ಟಿನಲ್ಲಿ, ಅನಂತರ ಮೆಡಿಟರೇನಿಯನ್ ಪ್ರಪಂಚದಲ್ಲಿ ಹಾಗೂ ಕೆಲವೊಮ್ಮೆ ಮಧ್ಯ ಪ್ರಾಚ್ಯದಲ್ಲಿ ಮತ್ತು ಯುರೋಪಿನಲ್ಲಿ ವ್ಯಾಪಕವಾಗಿ ಬಳಕೆಯಲ್ಲಿತ್ತು. ಇನ್ನೂ ಅನೇಕ ಬರಹದ ಸಾಮಗ್ರಿಗಳು ದೊರೆಯುತ್ತಿದ್ದರೂ, ಇದರಷ್ಟು ಪ್ರಯೋಜನಕಾರಿಯಾಗಿಯೂ ತೃಪ್ತಿಕರವಾಗಿಯೂ ಇರಲಿಲ್ಲ. ಅಲ್ಲವೆ ಅವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ತಯಾರಿಸುವುದೂ ಇದರಷ್ಟು ಸುಲಭವಾಗಿರಲಿಲ್ಲ. ಪೆಪಿರಸ್ಸನ್ನು ಮೊದಲಿಗೆ ಬಳಕೆಗೆ ತಂದವರು ಈಜಿಪ್ಟಿನ ಪುರೋಹಿತ ವರ್ಗದವರು ಎಂಬುದು ಸಾಮಾನ್ಯವಾದ ನಂಬಿಕೆ. ಈಗ ದೊರೆತಿರುವ ಕೆಲವು ಮೊದಲಿನ ನಮೂನೆಗಳು ಕ್ರಿ.ಪೂ. ೩೩೦೦ ವರ್ಷಗಳಷ್ಟು ಹಳೆಯವು. ಎಲ್ಲ ಕಾಲದಲ್ಲೂ ಇದರ ತಯಾರಿಕೆ ಲಾಭದಾಯಕವೆನಿಸಿದ್ದು, ಸರ್ಕಾರವೇ ಇದರಲ್ಲಿ ಸರ್ವಸ್ವಾಮ್ಯ ಹೊಂದಿರುತ್ತಿತ್ತು. ಈಜಿಪ್ಟಿನ ನೈಲ್ ಕಣಿವೆಯಲ್ಲಿ ಪೆಪಿರಸ್ ಗಿಡ ವಿಪುಲವಾಗಿ ಬೆಳೆಯುತ್ತಿತ್ತು. ಅನಂತರ ಇದರ ಬಳಕೆ ರೋಮ್ ಮತ್ತು ಬೈಜಾಂಟಿಯಮ್ (Byzantium)ಗಳಿಗೂ ವ್ಯಾಪಿಸಿತು. ರೋಮನ್ ಸಾಮ್ರಾಜ್ಯಕ್ಕೆ ಹಕ್ಕುದಾರನಾಗಲು ಬಯಸುತ್ತಿದ್ದ ಫರ್ಮಸ್

೧೧. ಲಿಪಿಕಾರರು

ಪ್ರಾಚೀನ ಈಜಿಪ್ಟಿನಲ್ಲಿ ಬೇರೆ ಜನರಿಗಿಂತ ಹೆಚ್ಚು ಮನ್ನಣೆ ಮತ್ತು ಸೌಲಭ್ಯಗಳನ್ನು ಪಡೆದಿದ್ದವರೆಂದರೆ ಲಿಪಿಕಾರರು. ಇತರರಿಗಿಂತ ತಮ್ಮಲ್ಲಿ ಏನೋ ಹೆಚ್ಚುಗಾರಿಕೆಯಿಂದು ಅವರು ಭಾವಿಸಿಕೊಂಡಿದ್ದರು. ದೊಡ್ಡ ದೊಡ್ಡ ಅಧಿಕಾರಿಗಳು ಕೂಡ ಕಾಣಿಕೆ ಸಲ್ಲಿಸುವ ಹಾಗೂ ಶವಸಂಸ್ಕಾರಕ್ಕೆ [illegible] ನಡುವನ್ನು ಬರೆಯುತ್ತಿರುವ 'ಪೆಪಿರಸ್'ಗೆ ಆಧಾರವಾಗಿದೆಯೇನೋ ಎಂಬಂತಿದೆ. ಬರವಣಿಗೆಯ ಸಾಧನ ಅವನ ಎಡಭುಜದಲ್ಲಿ ನೇತಾಡುತ್ತಿದೆ ಮತ್ತು ಎಡತೊಡೆಯ ಮೇಲೆ [illegible]

(Firmus), ಕ್ರಿ.ಶ. ೨೭೩ರಲ್ಲಿ ತಾನು ಪೆಪಿರಸ್ ವ್ಯಾಪಾರದಿಂದ ದೊರೆಯುವ ಹಣದಿಂದ ಇಡೀ ಸೈನ್ಯವನ್ನು ನಿರ್ವಹಿಸಬಲ್ಲೆನೆಂದು ಹೇಳಿಕೊಳ್ಳುತ್ತಿದ್ದನಂತೆ. ಪೆಪಿರಸ್ ಮೂಲತಃ ತೆಳುವಾದ ಮುರಿದು ಹೋಗುವ ವಸ್ತುವಾದ್ದರಿಂದ ಮಣ್ಣಿನ ಮಡಕೆ, ಕಾಜಿನ ಪಾತ್ರೆ, ಕವರುಗಳನ್ನು ಅದರ ರಕ್ಷಣೆಗೆಂದು ಬಳಸುತ್ತಿದ್ದರು. ಕ್ರಿಸ್ತಶತಕ ಆರಂಭದ ಕಾಲಕ್ಕೆ ಪೆಪಿರಸ್ ಕೊರತೆಯ ವಸ್ತುವಾಗತೊಡಗಿದ್ದರಿಂದ ಅದರ ಬೆಲೆ ತುಂಬಾ ಏರಿತು. ಪೆಪಿರಸ್ ಉಚ್ಛ್ರಾಯ ಕಾಲದಲ್ಲಿ ಅದನ್ನು ನೈಲ ನದಿಯ ಕೊಳ್ಳದಲ್ಲಿ ವಿಶೇಷವಾಗಿ ಬೆಳೆಯುತ್ತಿದ್ದದ್ದು, ಈಗ ಅದು ಸಂಪೂರ್ಣ ನಿರ್ನಾಮವಾಗಿದೆ.

ಕೊನೆಯದಾಗಿ ಪರಂಪರಾಗತ ತಂತ್ರಜ್ಞಾನದಲ್ಲಿ ಜಯಭೇರಿಯನ್ನು ಹೊಡೆದ ಕಾಗದವನ್ನು ಸಮಾಲೋಚಿಸಬಹುದು. ಇದರ ಉಗಮ ಸ್ಥಾನವೆಂದರೆ ಮತ್ತೆ ಚೀನವೇ. ಕಾಗದವನ್ನು ಕಂಡುಹಿಡಿದವ ಹಾನ್ ವಂಶದ ಚಕ್ರವರ್ತಿಯೊಬ್ಬನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಕೈ ಲುನ್ (Cai Lun) ಎಂದು ಸಾಮಾನ್ಯವಾಗಿ ಹೇಳುತ್ತಾರೆ. ಅದು ಸುಮಾರು ಕ್ರಿ. ಶ. ೧೦೫ ರಲ್ಲಿ ಅಸ್ತಿತ್ವಕ್ಕೆ ಬಂತು. ಇದರ ಅನ್ವೇಷಣೆಗೆ ಅನೇಕ ಕಾರಣಗಳಿದ್ದವು. ರೇಷ್ಮೆಯ ಬೆಲೆ ನಿರಂತರವಾಗಿ ಹೆಚ್ಚುತ್ತಿತ್ತು. ಬಿದಿರಿನ ಪುಸ್ತಕಗಳ ವ್ಯಾವಹಾರಿಕ ಬಳಕೆ ತುಂಬ ಕಷ್ಟದಾಯಕವಾಗಿತ್ತು. ಹಾಗೆಯೇ ಹಳೆಯ ರೇಷ್ಮೆ ಚಿಂದಿಗಳನ್ನು ಬಳಸಿ ತೆಳುವಾದ ಕಾಗದಂತಹ ಸಾಮಗ್ರಿಯನ್ನು ತಯಾರಿಸುವುದು ಸಹ ಅಷ್ಟು ಅನುಕೂಲವಾಗಿರಲಿಲ್ಲ. ಅಲ್ಲದೆ ಹಳೆಯ ರೇಷ್ಮೆ ಚಿಂದಿಗಳೂ ದುಬಾರಿಯಾಗಿದ್ದವು. ಈ ಕಾರಣಗಳಿಂದ ಕೈ ಲುನ್ ಕಟ್ಟಕಡೆಗೆ ರೇಷ್ಮೆಯ ಬದಲಾಗಿ ನೆನಸಿ ಮೆದು ಮಾಡಿದ ಲಿನೆನ್ ಚಿಂದಿಗಳನ್ನು ಉಪ್ಪುನೇರಳೆ, ತೊಗಟೆ, ದಚ್ಚಿಕಾಯಿ ಮತ್ತು ಹಳೆಯ ಚಪ್ಪಲಿ ಚೂರುಗಳ ಜೊತೆ ಸೇರಿಸಿ ಕಾಗದವನ್ನು ಸೃಷ್ಟಿಸಿದ. ಮುಂದೆ ಸ್ವಲ್ಪ ಕಾಲದಲ್ಲಿಯೇ ಲಿನೆನ್ ಬಳಸಿಕೊಂಡು ಚೀನೀಯರು ಒಳ್ಳೆಯ ಕಾಗದವನ್ನು ತಯಾರಿಸುವ ನೈಪುಣ್ಯ ಪಡೆದರು. ಲಿನೆನ್ನನ್ನು ಕೊಳೆಯಲು ಬಿಟ್ಟು, ಅನಂತರ ಶುಚಿಮಾಡಿ, ರುಬ್ಬಿ ಗೋಧಿ ಹಿಟ್ಟಿನಂತಹ ಒಂದು ಸೂಕ್ತ ಮಿಶ್ರಣವನ್ನು ಬೆರೆಸಿ ಕಡೆಯಲ್ಲಿ ತಯಾರಾದ ಪದಾರ್ಥವನ್ನು ಒಂದು ಚೌಕಟ್ಟಿನ ಮೇಲಿಟ್ಟು, ಒಣಗಿಸಿ ಕಾಗದ ತಯಾರಿಸುತ್ತಿದ್ದರು.

ಚೀನದಲ್ಲಿ ಕಾಗದದ ಆವಿಷ್ಕಾರವಾದ ಸುಮಾರು ಒಂದು ಸಾವಿರ ವರ್ಷಗಳ ಅನಂತರ ಅದು ಯುರೋಪನ್ನು ತಲುಪಿತು. ತಲುಪಿದ ಹಾದಿಯೂ ಸುಗಮವಾಗಿರಲಿಲ್ಲ. ಮೊದಲಿಗೆ ಕಾಗದ ತಯಾರಿಸುವ ವಿಧಾನವನ್ನು ತುಂಬ ಗುಪ್ತವಾಗಿಟ್ಟುಕೊಂಡಿದ್ದು, ಸರ್ಕಾರದ ಏಕಸ್ವಾಮ್ಯವಾಗಿಯೆ ಕಾಪಾಡಿಕೊಂಡು ಬರುತ್ತಿದ್ದರು. ಮೊದಲ ಆರು ನೂರು ವರ್ಷಗಳ ಕಾಲ ಈ ತಂತ್ರ ಗೊತ್ತಿದ್ದದ್ದು ಕೇವಲ ಚೀನಕ್ಕೆ ಮಾತ್ರ. ಕ್ರಿ.ಶ. ೭೫೧ರಲ್ಲಿ



೧೨. ಕಾಗದ

(ಅ) ಮೊದಲಿಗೆ ಸಂಸ್ಕೃತದಲ್ಲಿ ಬರೆದ 'ವಜ್ರಚ್ಛೇದಿಕಾ ಪ್ರಜ್ಞಾಪಾರಮಿತಾ ಸೂತ್ರ' ಎಂಬ ಬೌದ್ಧಕೃತಿಯ ಚೀನಿ ಅನುವಾದ. ಕ್ರಿ.ಶ ೮೬೮ಕ್ಕೆ ಸೇರುವ ಈ ಸುರುಳಿಯನ್ನು ಸಾಮಾನ್ಯವಾಗಿ ನಮಗೆ ದೊರೆತಿರುವ ಅತ್ಯಂತ ಹಳೆಯ (ಸಂಪೂರ್ಣವಾದ ಮತ್ತು ಕಾಲವು ದಾಖಲಾಗಿರುವ) ಮುದ್ರಿತ ಪುಸ್ತಕವೆಂದು ಪರಿಗಣಿಸಲಾಗಿದೆ.

(ಆ) 'ಒಂದು ಲಕ್ಷ ಬೌದ್ಧ ಕವಚಗಳು' ಎಂಬ ಈ ಗ್ರಂಥ ಈಗ ಉಳಿದಿರುವ ಅತ್ಯಂತ ಪುರಾತನ ಪಡಿಯಚ್ಚು ಮುದ್ರಣದ ಗ್ರಂಥಗಳಲ್ಲೊಂದು. ಧರ್ಮನಿಷ್ಠಳಾದ ಜಪಾನಿನ ಸಾಮ್ರಾಜ್ಞಿ ಶೋಟೋಕು ಎಂಬಾಕೆಯ ಆದೇಶದಂತೆ ಇದು ಕ್ರಿ.ಶ. ೭೬೪ ಮತ್ತು ೭೭೦ರ ನಡುವೆ ಮುದ್ರಿತವಾಯಿತು. ಪ್ರತಿಗಳನ್ನು ಸಣ್ಣ ಮರದ ಪೆಟ್ಟಿಗೆಗಳಲ್ಲಿಟ್ಟು ಜಪಾನಿನಾದ್ಯಂತ ಎಲ್ಲ ದೇವಾಲಯಗಳಿಗೂ ಹಂಚಲಾಯಿತು.

ಸಮರ್ಕಂದ್ (Samarkand) ನಲ್ಲಿದ್ದ ಮುಸಲ್ಮಾನ ಅಧಿಪತಿ, ದಂಡೆತ್ತಿ ಬಂದ ಚೀನೀಯರ ಆಕ್ರಮಣವನ್ನು ಹಿಮ್ಮೆಟ್ಟಿಸಿ ೨೦,೦೦೦ ಚೀನಿ ಸೈನಿಕರನ್ನು ಸೆರೆಯಾಳುಗಳಾಗಿ ಹಿಡಿದ ಎಂದು ಹೇಳುತ್ತಾರೆ. ಇವರ ಪೈಕಿ ಅನೇಕ ಜನ ಕಾಗದ ತಯಾರಿಸುವ ಒಂದು ಮಳಿಗೆಯನ್ನು ಸಮರ್ಕಂದ್‌ನಲ್ಲಿ ಹೂಡಿದರು ಎಂಬುದು ಒಂದು ಅಭಿಪ್ರಾಯವಾದರೆ, ಭಯಂಕರ ಚಿತ್ರಹಿಂಸೆಗೆ ಒಳಗಾಗಿದ್ದರಿಂದ ಅವರು ತಮ್ಮ ಗುಟ್ಟನ್ನು ಬಿಟ್ಟು ಕೊಡಬೇಕಾಯಿತು, ಎಂಬುದು ಮತ್ತೊಂದು ಅಭಿಪ್ರಾಯ. ಮುಂದಿನ ನೂರು ವರ್ಷಗಳ ಕಾಲ ಸಮರ್ಕಂದಿನ ಕಾಗದ ಉಳಿದ ಅನೇಕ ಪದಾರ್ಥಗಳಷ್ಟೇ ಪ್ರಮುಖವಾದ ರಫ್ತಿನ ಸರಕಾಯಿತು. ಆದರೆ ಇಸ್ಲಾಂ ಧರ್ಮದ ಸಾಮಾಜಿಕ ಮತ್ತು ರಾಜಕೀಯ ವಿಚಾರ ಧಾರೆಗನುಗುಣವಾಗಿ ಯಾವುದೇ ಪದಾರ್ಥವನ್ನು ಗುಟ್ಟಾಗಿಟ್ಟುಕೊಂಡು ಒಂದೇ ಪ್ರದೇಶಕ್ಕೆ ಸೀಮಿತಗೊಳಿಸಿಕೊಳ್ಳುವ ಹಾಗಿರಲಿಲ್ಲ. ಈ ಕಾರಣದಿಂದಾಗಿ ಕಾಗದವು ಬೇಗನೆ ಮಧ್ಯ ಪ್ರಾಚ್ಯದಲ್ಲಿ ತಯಾರಾಗತೊಡಗಿತು. ಬಗ್ದಾದ್, ಡಮಾಸ್ಕಸ್, ಟೈಬೆರಿಯಸ್, ಹಮಾಹ್, ಟ್ರೈಪೊಲಿ ಮತ್ತು ತದನಂತರ ಕೈರೊ ಪ್ರಮುಖ ಕಾಗದ ಉತ್ಪಾದನ ಕೇಂದ್ರಗಳಾದವು. ಕಚ್ಚಾ ಸಾಮಗ್ರಿಗಳಿಗೆ ಬೇಡಿಕೆ ಹೆಚ್ಚಿತು. ಈಜಿಪ್ಟಿನಲ್ಲಿ ಕ್ರಿ. ಶ. ೧೧೯೩ ರಿಂದ ೧೨೦೭ ರವರೆಗೆ ವ್ಯಾಪಿಸಿದ ಬಗ್ದಾದಿನ ವೈದ್ಯ 'ಅಬ್ದುಲ್ ಲತೀಫ್' ಎಂಬಾತ, ಈಜಿಪ್ಟಿನ ರೈತರು ಲಿನೆನ್ನಿನಿಂದ ತಯಾರಿಸಿದ ಶವವಸ್ತ್ರಗಳನ್ನು ಉಡುಪಿಗಾಗಿಯೊ ಅಥವಾ ಕಾಗದದ ಕಾರ್ಖಾನೆಗಳಿಗೆ ಮಾರುವುದಕ್ಕಾಗಿಯೊ, ಸ್ಮಶಾನಗಳನ್ನು ಕೊಳ್ಳೆ ಹೊಡೆಯುತ್ತಿದ್ದರು ಎಂಬುದನ್ನು ವಿವರಿಸಿದ್ದಾನೆ. ಹನ್ನೆರಡನೆಯ ಶತಮಾನದಲ್ಲಿ ಅರಬ್ಬರು ಕಾಗದವನ್ನು ಸ್ಪೈನ್ ಮತ್ತು ಸಿಸಿಲಿಗಳಿಗೆ ಕೊಂಡೊಯ್ದರು. ಅನಂತರ ಒಂದು ಶತಮಾನದ ಮೇಲೆ ಕಾಗದ ಭಾರತವನ್ನು ಪ್ರವೇಶಿಸಿತು.* ಚಿಂದಿ ಬಟ್ಟೆಗಳು ಇದರ ತಯಾರಿಕೆಗೆ ತುಂಬ ಅಗತ್ಯವಾದ ಒಂದು ಕಚ್ಚಾ ಸಾಮಗ್ರಿ. ಇದನ್ನು

---

* ಕರ್ನಾಟಕದಲ್ಲಿ ಕಾಗದದ ಬಳಕೆ ಎಂದಿನಿಂದ ಮೊದಲಾಯಿತೆಂಬುದನ್ನು ಅಧಿಕೃತವಾಗಿ ಹೇಳಲು ಸಾಧ್ಯವಿಲ್ಲ. ನಮಗೆ ದೊರೆತ ಅದರ ಪ್ರಥಮ ಉಲ್ಲೇಖವು ಕ್ರಿ.ಶ. ೧೩೧೦ರ ಒಂದು ಮೈಸೂರಿನ ಶಾಸನದಲ್ಲಿ 'ಕಾಗಜ' ಎಂಬುದಾಗಿ ಬಂದಿದೆ. (M.A.R. 1931) ಆ ಮುಂದಿನದು ಮಂಗರಾಜನ ಅಭಿನವಾಭಿದಾನಂ ಎಂಬ ಕೋಶದಲ್ಲಿ (೧೩೯೮). ಹದಿನಾಲ್ಕನೆಯ ಶತಮಾನದಿಂದ ಇಲ್ಲಿ ಕಾಗದವು ಒಂದು ಗೃಹಕೈಗಾರಿಕೆಯಾಗಿ ತಯಾರಾಗುತ್ತಿದ್ದಿತು, ಎನ್ನಬಹುದು. ಉತ್ತರ ಕರ್ನಾಟಕದ ಕೆಲವು ಮುಸ್ಲಿಂ ಮನೆತನಗಳ ಅಡ್ಡಹೆಸರು 'ಕಾಗಜ' ಎಂದು ಈಗಲೂ ಉಳಿದಿದೆ.

ಶ್ರೀ. ಹಾ.

೧೩. ಕಾಗದ ತಯಾರಿಕೆ

ಜಪಾನಿನಲ್ಲಿ ಓರ್ವನು ಕಾಗದವನ್ನು ತಯಾರಿಸುತ್ತಿದ್ದಾನೆ. ಅದರ ಸಲಕರಣೆ ಮತ್ತು ವಿಧಾನ ೧೮ನೆಯ ಶತಮಾನದ್ದು.

"ಬಟ್ಟೆ ಪಾರ್ಚ್‌ಮೆಂಟ್" ಎಂದು ಸರಿಯಾಗಿಯೆ ಕರೆಯಲಾಗಿದೆ. ಕ್ರಿ. ಶ. ೧೪೯೨ರಲ್ಲಿ ಸ್ಪೈನ್, ಮುಸಲ್ಮಾನರ ಕೈಬಿಟ್ಟು ಹೋದಾಗ ಕಾಗದ ತಯಾರಿಸುವ ರೀತಿ ಇನ್ನೂ ಹೆಚ್ಚು ಪಳಗಿರದ ಕ್ರೈಸ್ತ ಕೆಲಸಗಾರರ ಕೈಸೇರಿ ತನ್ನ ಉತ್ತಮ ಗುಣಮಟ್ಟವನ್ನು ಬೇಗ ಕಳೆದು ಕೊಂಡಿತು. ಆದರೆ ಕ್ರಮೇಣ ಮುಂದಿನ ಶತಮಾನಗಳಲ್ಲಿ ಕಾಗದದ ಕೈಗಾರಿಕೆ ಯುರೋಪಿನಲ್ಲಿ ಭದ್ರವಾಗಿ ನೆಲೆಯೂರಿತಾದರೂ ೧೯ನೇ ಶತಮಾನದವರೆಗೆ ಕಾಗದ ತಯಾರಿಕೆಯ ತಂತ್ರ ವಿಧಾನಗಳಲ್ಲಿ ಯಾವ ಬದಲಾವಣೆ ಆಗಿರಲಿಲ್ಲ. ಆಮೇಲೆ ಹಲವಾರು ಆರ್ಥಿಕ ಕಾರಣಗಳಿಂದಾಗಿ, ಸಾರ್ವಜನಿಕ ಶಿಕ್ಷಣದ ವ್ಯಾಪಕ ಪ್ರಚಾರದಿಂದಾಗಿ ಅದರ ಬೇಡಿಕೆ ವಿಪರೀತ ಹೆಚ್ಚಿ ಲಿನೆನ್ನಿಗೆ ಬದಲಾಗಿ ಮರವನ್ನು ಬಳಸತೊಡಗಿದರು. ಈ ರೀತಿಯ ಬದಲಾವಣೆಯಿಂದ ತಯಾರಿಕೆಯ ಪ್ರಮಾಣ ಹೆಚ್ಚಾದರೂ ಗುಣಮಟ್ಟ ಗಾಳಿಪಾಲಾಯಿತು. ಇವತ್ತು ಯುರೋಪದಲ್ಲಿ ಪರಿಚಯವಿರುವ ಕಾಗದವು, ಗುಣಮಟ್ಟ, ಬಾಳಿಕೆ ಹಾಗೂ ಮೆರಗು ಯಾವುದೇ ದೃಷ್ಟಿಯಿಂದ ಪೌರ್ವಾತ್ಯ ದೇಶಗಳ ಕಾಗದಕ್ಕಿಂತ ಕಳಪೆ ಮಟ್ಟದ್ದೇ ಸರಿ.

'ನೆಲ್ಲು ಕಾಗದ' ಎನ್ನುವುದಕ್ಕೂ ಬತ್ತಕ್ಕೂ ಯಾವ ಸಂಬಂಧವೂ ಇಲ್ಲ! ಅರಾಲಿಯಾ ಪೆಪಿರಿಫೆರಾ (Aralia Papyrifera) ಎಂಬ ಸಣ್ಣ ತಿರುಳಿನಿಂದ ಇದನ್ನು ತಯಾರಿಸುತ್ತಾರೆ. ಈ ಮರ ಮುಖ್ಯವಾಗಿ ಫಾರ್ಮೋಸಾ (Formosa)ದ ಜೌಗು ಕಾಡುಗಳಲ್ಲಿ ಬೆಳೆಯುತ್ತದೆ. ಪೆಪಿರಸ್ ತಯಾರಿಸುವ ರೀತಿಯಲ್ಲಿಯೇ ನೆಲ್ಲು ಕಾಗದವನ್ನು ತಯಾರಿಸುತ್ತಾರೆ.

ಕೆಲವು ಅಪರೂಪದ ಸಾಮಗ್ರಿಗಳು

ನಾವು ಪರಿಗಣಿಸಲಿರುವ ಇನ್ನೂ ಕೆಲವು ಬರವಣಿಗೆ ಸಾಮಗ್ರಿಗಳು ತುಂಬ ಅಪರೂಪವಾದುವು ಮತ್ತು ದುಬಾರಿಯಾದುವು. ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಇವುಗಳನ್ನು ಬಳಸುತ್ತಿದ್ದರು. ಉದಾ: ಹಣ್ಣುಗಳು. ಸೇಬು, ನಿಂಬೆ ಅಥವಾ ಪೀಚ್ ಹಣ್ಣುಗಳ ಮೇಲೆ ಪ್ರೇಮಕ್ಕೆ ಸಂಬಂಧಪಟ್ಟ ಗುಪ್ತ ಬರವಣಿಗೆಗಳನ್ನು ಬರೆಯುತ್ತಿದ್ದ ವಿಚಾರ ಷಹಜಾದ್ ಕತೆಗಳಲ್ಲಿ ಮತ್ತು ಅದೇ ರೀತಿಯ ಸಮಕಾಲೀನ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಗುಲಾಮ ಹುಡುಗಿಯರ ಅಂಗೈ ಮೇಲೆ ಪದ್ಯಗಳನ್ನು ಬರೆಯಲು ಗೋರಂಟಿಯನ್ನು ಬಳಸುತ್ತಿದ್ದರು. ಹಾಗೆಯೆ ಗುಪ್ತ ಸಂದೇಶಗಳನ್ನು ಯೋಗರ್ಟ್ (Yogurt)/ ಮೊಸರಿನ ಅಥವಾ ಈರುಳ್ಳಿ ರಸದಿಂದ ಪೆಪಿರಸ್ ಮೇಲೆ ಬರೆದು ಕಳಿಸುತ್ತಿದ್ದರು. ಆಮೇಲೆ ಪೆಪಿರಸ್ ಎಲೆಯ ಬೂದಿಯನ್ನು ಹಚ್ಚಿ ಯೋಗರ್ಟ್ ಬರವಣಿಗೆ

ಯನ್ನೂ, ಬೆಂಕಿಯ ಝಳಕ್ಕೆ ಹಿಡಿದು ಈರುಳ್ಳಿ ರಸದಿಂದ ಬರೆದ ಬರವಣಿಗೆಯನ್ನು ಓದಿಕೊಳ್ಳುತ್ತಿದ್ದರು.

ಬರೆಯುವ ಸಲಕರಣೆಗಳು

ಬರಹದ ಕೆಲಸವನ್ನು ವಾಸ್ತವವಾಗಿ ಎರಡು ಬೇರೆ ಬೇರೆ ವಿಧಾನಗಳಲ್ಲಿ ಮಾಡಬಹುದೆಂದು ನಾವು ಈಗಾಗಲೇ ನೋಡಿದ್ದೇವೆ. ಮೊದಲನೆಯದಾಗಿ ಚೂಪಾದ ಯಾವುದಾದರೂ ಸಲಕರಣೆಯಿಂದ (ಚೂಪು ಲೇಖನಿ ಅಥವಾ ಸ್ಟೈಲಸ್, ಚಾಕು, ಕಲ್ಲು ಕುಟ್ಟಿಗನ ಉಪಕರಣ ಇತ್ಯಾದಿ). ಬರಹದ ಸಾಮಗ್ರಿಯ ಮೇಲೆ ಕೆತ್ತಿ ಬರೆಯಬಹುದು. ಎರಡನೆಯದಾಗಿ ಲೇಖನಿ (ಪುಕ್ಕ, ಜೊಂಡು, ಮರ ಅಥವಾ ಲೋಹ) ಅಥವಾ ಕುಂಚ ದಿಂದ ಮಸಿ, ಬಣ್ಣ ಅಥವಾ ಮೆರುಗೆಣ್ಣೆ ಬಳಸಿ ಬರವಣಿಗೆ ಸಾಮಗ್ರಿಯ ಮೇಲೆ ನೇರ ವಾಗಿ ಬರೆಯಬಹುದು. ಕಲ್ಲು ಅಥವಾ ಲೋಹದ ಮೇಲಿರುವ ಬರವಣಿಗೆಯನ್ನು ಸ್ಥಳಾಂತರಿಸುವುದು. ಒಂದು ಮಧ್ಯಂತರ ವಿಧಾನ. ತಾರ್ಕಿಕವಾಗಿ ಯೋಚಿಸಿದರೆ ಇದೇ ಮುದ್ರಣ ಕಲೆಯತ್ತ ನಮ್ಮನ್ನು ಕೊಂಡೊಯ್ಯುತ್ತದೆ. ಅನೇಕ ಭಾಗಗಳಲ್ಲಿ ಬರೆಯುವ ಕ್ರಿಯಾಸೂಚಕವಾದ ಪದ ಒಂದಲ್ಲ ಒಂದು ರೀತಿಯಲ್ಲಿ 'ಬಣ್ಣಹಚ್ಚು', 'ಕತ್ತರಿಸು', 'ಸೀಳು ಅಥವಾ ಕೆರೆ' ಎಂಬರ್ಥದ ಧಾತುಗಳಿಂದ ಸಿದ್ಧಿಸಿರುವುದು ಕೇವಲ ಆಕಸ್ಮಿಕವೇನೂ ಅಲ್ಲ. ಮಸಿಯ ಬಳಕೆ ಅನಾದಿ ಕಾಲದಿಂದಲೂ ಇದೆ. ಅದರ ಅನೇಕ ಬಗೆಗಳನ್ನು ತಯಾರಿಸುವ ವಿವಿಧ ವಿಧಾನಗಳು ಕಾಲಾನುಕ್ರಮವಾಗಿ ನಮ್ಮ ಸ್ವತ್ತಾಗಿ ಉಳಿದು ಬಂದಿವೆ. ಅವುಗಳಲ್ಲಿ ಬಹಳಷ್ಟು ಮಸಿಗಳ ಮೂಲಸಾಮಗ್ರಿ ದೀಪದ ಕಪ್ಪು. ಇದನ್ನು ಅಗತ್ಯಕ್ಕನುಗುಣವಾಗಿ ಶಿಲಾರಾಳ, ಗೋಂದು, ಜೇನುತುಪ್ಪ, ಬೋರ‍್ಯಾಕ್ಸ್‌ಗಳೊಡನೆ ಬೆಳೆಸಿ ಬೇಕಾದ ಸಾಂದ್ರತೆಯ ಮಸಿಯನ್ನು ತಯಾರಿಸಿಕೊಳ್ಳುತ್ತಿದ್ದರು. ಬಣ್ಣದ ಮಸಿ ಬೇಕಾಗಿದ್ದಲ್ಲಿ ಯಾವುದಾದರೂ ಬಣ್ಣ ತರುವ ಪದಾರ್ಥವನ್ನು (ಕೆಲವು ವೇಳೆ ಚಿನ್ನ ಅಥವಾ ಬೆಳ್ಳಿ) ಸುಟ್ಟು ಬಾದಾಮಿ ಅಥವಾ ಗೋಮೂತ್ರದೊಡನೆ ಬೆರೆಸಿ ಮಾಡಿ ಕೊಳ್ಳುತ್ತಿದ್ದರು.

ಯಾವುದೇ ಕ್ಷೇತ್ರದಲ್ಲಿ ಮಾನವನ ಸಾಧನೆಗಳ ಚರಿತ್ರೆಯನ್ನು ಕುರಿತು ಅಧ್ಯಯನ ನಡೆಸುವ ವಿಚಾರದಲ್ಲಿ ಗಯಟೆ ತನ್ನ ಕೃತಿಯಾದ 'ಫೌಸ್ಟ್' (Faust)ನಲ್ಲಿ ನಿಜವಾದ ಮೌಲಿಕತೆ ಬಹುಮಟ್ಟಿಗೆ ಅಸಾಧ್ಯ ಎಂದಿದ್ದಾನೆ. ಆದರೆ ಪ್ರತಿಯೊಂದಕ್ಕೂ ಹೆಚ್ಚು ಕಡಿಮೆ ಕಿಂಚಿತ್ತಾದರೂ ಮೌಲಿಕತೆ ಇರುವುದರಿಂದ, ಈ ದಿಶೆಯಲ್ಲಿ ಏನೇ ಪ್ರಯತ್ನಗಳು ನಡೆದಿದ್ದರೂ ಮತ್ತೆ ಮತ್ತೆ ಅಧ್ಯಯನವನ್ನು ಮುಂದುವರಿಸುವುದು ಅಗತ್ಯ. ಕ್ರಿ. ಶ.

೧೦ನೇ ಶತಮಾನದಲ್ಲಿ 'ಖಲೀಫ ಅಲ್ ಮುಯಿಜ್' ತನಗೆ ತಾನೇ ಮಸಿಯನ್ನು ಒದಗಿಸಿಕೊಳ್ಳುವ, ಬರೆಯ ಬೇಕಾದಾಗ ಮಾತ್ರ ಮಸಿ ಹರಿಯುವ, ಉಳಿದ ಸಮಯದಲ್ಲಿ ಹಾಗೆಯೆ ಸುರಕ್ಷಿತವಾಗಿ ಬಟ್ಟೆಗಳು ಕೊಳೆಯಾಗದಂತೆ ಕೊಂಡೊಯ್ಯಬಹುದಾದ ಒಂದು ಲೇಖನಿ ಬೇಕೆಂದು ಬಯಸಿದ್ದನಂತೆ. ನಾವು ಇಂದು ಬಳಸುವ ಫೌಂಟನ್‌ಪೆನ್ ಇದೇ ಅಲ್ಲದೆ ಮತ್ತೇನು? ಖಲೀಫ ಬೇಕೆಂದ ಮೇಲೆ ಇಲ್ಲ ಎನ್ನುವುದಕ್ಕಾಗುತ್ತದೆಯೆ? ಅವನ ಇಚ್ಛೆ ಕೈಗೂಡಿತು: ಅನೇಕ ನಿಷ್ಫಲ ಪ್ರಯತ್ನಗಳನ್ನು ನಡೆಸಿದ ಮೇಲೆ ಕಡೆಗೆ ಅವನ ತಂತ್ರಜ್ಞರು ಆ ರೀತಿಯ ಒಂದು ಲೇಖನಿಯನ್ನು ತಯಾರಿಸಿಕೊಟ್ಟರು. ಅದು ಚಿನ್ನದ್ದೇ ಆಗಿತ್ತೆಂದು ಬೇರೆ ಹೇಳುವ ಅಗತ್ಯವಿಲ್ಲವಲ್ಲ!

ಹಸ್ತಪ್ರತಿಶಾಸ್ತ್ರ ವಿಭಾಗವು 'ಪ್ರಾಚೀನ ಲೇಖನ ಸಾಮಗ್ರಿಗಳು' ಎನ್ನುವ ಅಪೂರ್ವ ಮತ್ತು ವಿಶಿಷ್ಟಪೂರ್ಣವಾದ ಪುಸ್ತಕವೊಂದನ್ನು ತನ್ನ ವಿಭಾಗ ಮಾಲೆಯಲ್ಲಿ ಪ್ರಕಟಿಸಿದೆ. ಇದರ ಮೂಲ ಲೇಖಕರು ಡಾ. ಆಲ್ಬರ್ಟಿನ್ ಗೌರ್. ಜಗತ್ತಿನ ಹಸ್ತಪ್ರತಿಗಳ ಸ್ವರೂಪ, ಬರವಣಿಗೆಯ ಪರಿಕರಗಳು, ಲಿಪಿಕಾರರ ಅನೇಕ ರೀತಿಯ ಬರವಣಿಗೆಯ ಸಾಂಸ್ಕೃತಿಕ ನೆಲೆಗಳನ್ನು ಈ ಪುಟ್ಟ ಕೃತಿ ಹೊತ್ತು ನಿಂತಿದೆ. ಇಂತಹ ಒಂದು ಪುಸ್ತಕವನ್ನು ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿಕೊಟ್ಟ ನಾಡಿನ ಖ್ಯಾತ ವಿದ್ವಾಂಸರಾದ ಡಾ. ಶ್ರೀನಿವಾಸ ಹಾವನೂರು ಮತ್ತು ಡಾ. ಲಕ್ಷ್ಮೀನಾರಾಯಣ ಅರೋರಾ ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಡಾ. ಎಚ್.ಜೆ. ಲಕ್ಕಪ್ಪಗೌಡ
ಕುಲಪತಿಯವರು